ಭಾರತೀಯ ಜನತಾ ಪಾರ್ಟಿ – ಕರ್ನಾಟಕ



# ಮೋದಿ ಗ್ಯಾರಂಟಿ

# 2024

ಮತ್ತೊಮ್ಮೆ

**ಮೋದಿ ಸರ್ಕಾರ**











# ಪರಿವಿಡಿ


- ರಾಷ್ಟ್ರೀಯ ಜನತೆಗೆ ಶ್ರೀ ನರೇಂದ್ರ ಮೋದಿ ರವರ ಪತ್ರ ........ 01
- ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ರವರ ನುಡಿ ........ 03
- ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ನುಡಿ ........ 05
- ಬಡಜನರ ಸಬಲೀಕರಣ ........ 06
- ಮಧ್ಯಮ ವರ್ಗಕ್ಕೆ ಮೋದಿ ಗ್ಯಾರಂಟಿ ........ 07
- ನಾರಿ ಶಕ್ತಿ ಸಬಲೀಕರಣಕ್ಕಾಗಿ ಮೋದಿ ಗ್ಯಾರಂಟಿ ........ 08
- ಯುವ ಜನತೆಗೆ ಮೋದಿ ಗ್ಯಾರಂಟಿ ........ 09
- ಹಿರಿಯ ನಾಗರಿಕರಿಗೆ ಮೋದಿ ಗ್ಯಾರಂಟಿ ........ 10
- ಕಿಸಾನ್ ಸಮ್ಮಾನ್‌ಗೆ ಮೋದಿ ಗ್ಯಾರಂಟಿ ........ 11
- ಮೀನುಗಾರರಿಗೆ ಮೋದಿ ಗ್ಯಾರಂಟಿ ........ 13
- ಶ್ರಮಿಕ ಬಂಧುಗಳಿಗೆ ಮೋದಿ ಗ್ಯಾರಂಟಿ ........ 14
- ಎಂಎಸ್‌ಎಂಇ, ಸಣ್ಣ ವ್ಯಾಪಾರಿಗಳು ಮತ್ತು ವಿಶ್ವಕರ್ಮರಿಗೆ ಮೋದಿ ಗ್ಯಾರಂಟಿ ........ 15
- ಎಲ್ಲರೊಂದಿಗೆ, ಎಲ್ಲರ ವಿಕಾಸವೇ ಮೋದಿ ಗ್ಯಾರಂಟಿ ........ 16
- ವಿಶ್ವಬಂಧು ಭಾರತಕ್ಕಾಗಿ ಮೋದಿ ಗ್ಯಾರಂಟಿ ........ 18
- ಸುರಕ್ಷಿತ ಭಾರತಕ್ಕಾಗಿ ಮೋದಿ ಗ್ಯಾರಂಟಿ ........ 20
- ಸಮೃದ್ಧ ಭಾರತವೇ ಮೋದಿಯ ಗ್ಯಾರಂಟಿ ........ 22
- ಜಾಗತಿಕ ಉತ್ಪಾದನಾ ಕೇಂದ್ರಕ್ಕೆ ಮೋದಿ ಗ್ಯಾರಂಟಿ ........ 23
- ವಿಶ್ವ-ದರ್ಜೆಯ ಮೂಲ ಸೌಕರ್ಯಕ್ಕೆ ಮೋದಿ ಗ್ಯಾರಂಟಿ ........ 26
- ಇಂಧನ ಭದ್ರತೆ ........ 29
- ಸುಲಲಿತ ನಗರ ಜೀವನೋಪಾಯಕ್ಕಾಗಿ ಮೋದಿ ಗ್ಯಾರಂಟಿ ........ 30
- ಸಾಂಸ್ಕೃತಿಕ ಪರಂಪರೆಯ ವಿಕಾಸಕ್ಕೆ ಮೋದಿ ಗ್ಯಾರಂಟಿ ........ 32
- ಉತ್ತಮ ಆಡಳಿತಕ್ಕೆ ಮೋದಿ ಗ್ಯಾರಂಟಿ ........ 34
- ಸ್ವಸ್ಥ ಭಾರತಕ್ಕೆ ಮೋದಿ ಗ್ಯಾರಂಟಿ ........ 36
- ಗುಣಮಟ್ಟದ ಶಿಕ್ಷಣಕ್ಕೆ ಮೋದಿ ಗ್ಯಾರಂಟಿ ........ 37
- ಕ್ರೀಡಾ ಕ್ಷೇತ್ರದಲ್ಲಿ ಉನ್ನತ ಸಾಧನೆಗೆ ಮೋದಿ ಗ್ಯಾರಂಟಿ ........ 38
- ಸಮತೋಲಿತ ಪ್ರಾದೇಶಿ ಅಭಿವೃದ್ಧಿಗೆ ಮೋದಿ ಗ್ಯಾರಂಟಿ ........ 39
- ತಂತ್ರಜ್ಞಾನ ಮತ್ತು ಆವಿಷ್ಕಾರಕ್ಕಾಗಿ ಮೋದಿ ಗ್ಯಾರಂಟಿ ........ 40
- ಸುಸ್ಥಿರ ಭಾರತಕ್ಕೆ ಮೋದಿ ಗ್ಯಾರಂಟಿ ........ 42

# ರಾಷ್ಟ್ರೀಯ ಜನತೆಗೆ ಶ್ರೀ ನರೇಂದ್ರ ಮೋದಿ ರವರ ಪತ್ರ



"

**ನನ್ನ ಪ್ರೀತಿಯ ಪರಿವಾರದ ಜನರೇ**

ಕಳೆದ ಒಂದು ದಶಕದಿಂದ ನೀವು ದೇಶದಲ್ಲಿ ಬಿಜೆಪಿಯ ಸರಕಾರ ಅಧಿಕಾರವನ್ನು ನಡೆಸುವ ಜವಾಬ್ದಾರಿಯನ್ನು ವಹಿಸಿದ್ದೀರಿ. ನಮ್ಮ ದೇಶದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಸಮಯದಲ್ಲಿ ನಿಮ್ಮ ಪ್ರಧಾನ ಸೇವಕನಾಗಲು ನೀವು ನನ್ನನ್ನು ಆಶೀರ್ವದಿಸಿದ್ದೀರಿ ಎಂಬ ಅಂಶವು ನನ್ನನ್ನು ಇನ್ನಷ್ಟು ಶ್ರಮಿಸಲು ಪ್ರೇರೇಪಿಸುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ನನ್ನ ಶಕ್ತಿಯ ಕಣ ಕಣವನ್ನೂ, ನನ್ನ ಸಮಯದ ಕ್ಷಣ ಕ್ಷಣವನ್ನು ನಿಮ್ಮ ಸೇವೆಗೆ ಮುಡಿಪಾಗಿಟ್ಟಿದ್ದೇನೆ

ಕಳೆದ ಹತ್ತು ವರ್ಷದಲ್ಲಿ ದೇಶದ ಅಭಿವೃದ್ಧಿ ನಾಗಾಲೋಟದಲ್ಲಿ ಸಾಗಿದೆ. ದೇಶದ ಜನರ ಯೋಚನಾ ದೃಷ್ಟಿಯೂ ಬದಲಾಗಿದೆ.  ಭಾರತದ ಯುವಕರು 2047ರ ಹೊತ್ತಿಗೆ ವಿಕಸಿತ ಭಾರತದ ನಿರ್ಮಾಣದ ಕನಸನ್ನು ಕಾಣುತ್ತಿದ್ದಾರೆ. ಆತ್ಮನಿರ್ಭರ ಭಾರತದ ಯೋಜನೆಯೊಂದಿಗೆ ಆ ಗುರಿ ತಲುಪುವುದು ಕಷ್ಟಸಾಧ್ಯವಲ್ಲ ಎಂಬ ಪರಿಸ್ಥಿತಿಯನ್ನು ಇಂದು ಕಾಣುತ್ತಿದ್ದೇವೆ.

ಕಳೆದ ಒಂದು ದಶಕದ ಸಬ್ ಕಾ ಸಾತ್ ಸಬ್ ಕಾ ವಿಕಾಸ್ ಸಬ್ ಕಾ ವಿಶ್ವಾಸ್ ಸಬ್ ಕಾ ಪ್ರಯಾಸ್ ಎನ್ನುವ ಮೂಲಮಂತ್ರದ ಫಲವಾಗಿ ಭಾರತ ವಿಶ್ವದ 5 ವಿಷಮ ಆರ್ಥಿಕ ಪರಿಸ್ಥಿತಿಗಳ ನಡೆವೆಯೂ ದೇಶವಿಂದು ವಿಶ್ವದ 5ನೇ ಬಲಿಷ್ಠ ಆರ್ಥಿಕ ಶಕ್ತಿಯಾಗಿ ಬದಲಾಗಿದೆ. ಮತ್ತು ಇದರ ಫಲ ಪ್ರತಿಯೊಬ್ಬ ಭಾರತೀಯನಿಗೂ ಸಿಕ್ಕಿದೆ.

ಕಳೆದ 10 ವರ್ಷದಲ್ಲಿ ದೇಶದ 25 ಕೋಟಿ ಜನರನ್ನು ಬಡತನ ರೇಖೆಯಿಂದ ಮೇಲೆತ್ತುವ ಕೆಲಸವಾಗಿದೆ. ಮೂಲಭೂತ ಸೌಕರ್ಯದಿಂದ ವಂಚಿತರಾವಾಗಿದ್ದ ಭಾರತದ ಜನತೆಗೆ ನಮ್ಮ ಸರಕಾರದ ಯೋಜನಾಬದ್ಧ ನೀತಿಯ ಕಾರಣ ಸೂರು, ಅಡುಗೆ ಅನಿಲ, ವಿದ್ಯುತ್, ಶೌಚಾಲಯ, ಬ್ಯಾಂಕ್ ಖಾತೆ, ನೀರು ಮುಂತಾದ ಸೌಲಭ್ಯಗಳು ಸಿಕ್ಕಿವೆ. ಈ ಕಾಲದ ಹೊಸ ತಂತ್ರಜ್ಞಾನದ ಸೌಲಭ್ಯಗಳೂ ಅವರಿಗೆ ದಕ್ಕಿದೆ. ದೇಶ ಸಾಧಿಸಿದ ಈ ಅಭೂತಪೂರ್ವ ಸಾಧನೆಯಿಂದಾಗಿ ದೇಶದ ಮಹಿಳೆಯರು, ರೈತರು, ಮೀನುಗಾರರು, ಬೀದಿ ವ್ಯಾಪಾರಿಗಳು, ಸಣ್ಣ ಉದ್ಯಮಿಗಳು, ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳ ಜೀವನದಲ್ಲಿ ಭಾರಿ ಬದಲಾವಣೆ ತಂದಿದೆ.

ರೈತರು ನಮ್ಮ ದೇಶದ ಪ್ರಗತಿಗೆ ಬೆನ್ನೆಲುಬು. ಜಾಗತಿಕ ಬೆಲೆ ಏರಿಕೆಯ ನಡುವೆಯೂ ಅವರಿಗೆ ಅಗ್ಗದ ದರದಲ್ಲಿ ರಸಗೊಬ್ಬರ ಪೂರೈಸಲಾಯಿತು ಪಿ ಎಮ್ ಕಿಸಾನ್ ಎನ್ನುವ ಸುರಕ್ಷಿತ ವ್ಯವಸ್ಥೆಯ ಮೂಲಕ ಬೆಳೆ ವಿಮೆ ಸಿರಿಧಾನ್ಯಗಳಿಗೆ ಉತ್ತೇಜನ ಸೇರಿದಂತೆ ಕೃಷಿ ಉತ್ತೇಜನಕ್ಕೆ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಿತ್ತನೆ ಬೀಜದಿಂದ ಮಾರುಕಟ್ಟೆಯ ತನಕ ಅವರಿಗೆ ನೀಡಿದೆ ಉತ್ತೇಜನದ ಕಾರಣದಿಂದ ರೈತರು ಅದ್ಭುತಗಳನ್ನು ಸಾಧಿಸಿದ್ದಾರೆ.

ವಿಕಾಸ ಮತ್ತು ಸಾಂಸ್ಕೃತಿಕ ಪರಂಪರೆ ಎಂಬ ಎರಡು ಹಳಿಗಳ ಮೇಲೆ ಸಾಗುತ್ತಾ ಪ್ರಕೃತಿ ಮತ್ತು ಅರ್ಥವ್ಯವಸ್ಥೆ ಎರಡರ ನಡುವೆ ಸಂತುಲಿತತೆಯನ್ನು ಕಾಪಾಡಿಕೊಂಡು ದೇಶ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ. ಇಂದು ನಮ್ಮ ದೇಶದ ಯುವ ಜನತೆ ಕಾಣುತ್ತಿರುವ ಅದ್ಭುತ ಕನಸುಗಳೆ ದೇಶದ ಅಭಿವೃದ್ಧಿಯ ವೇಗೋತ್ಕರ್ಷದ ಇಂಧನ. ವಿಜ್ಞಾನ, ತಂತ್ರಜ್ಞಾನ, ಬಾಹ್ಯಾಕಾಶ, ಸ್ಟಾರ್ಟ್‌ಅಪ್, ಕ್ರೀಡೆಗಳಲ್ಲಿ ಅದ್ಭುತ ಸಾಧನೆಗಳನ್ನು ಮಾಡುತ್ತಿದ್ದಾರೆ.

ಕಳದ ಹತ್ತು ವರ್ಷದ ಈ ಯಾತ್ರೆ ನನಗೆ ಮತ್ತು ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತನಿಗೆ ಒಂದು ಅದ್ಭುತ ಭಾವನಾತ್ಮಕ ಪಯಣವಾಗಿದೆ. ಕೆಂಪುಕೋಟೆಯ ಮೇಲಿನ ನನ್ನ ಹಿಂದಿನ ಭಾಷಣದಲ್ಲಿ "ಇದೇ ಸಮಯ, ಸರಿಯಾದ ಸಮಯ" ಎಂದಿದ್ದೆ. ಇವತ್ತು ದೇಶದ ವಿದೇಶಗಳ ಅನೇಕ ಗಣ್ಯ ವ್ಯಕ್ತಿಗಳು ಮುತ್ಸದ್ದಿಗಳು ಇದು ಭಾರತದ ಸಮಯ ಎಂದೇ ಹಳುತ್ತಿದ್ದಾರೆ. ಇಂದು ಜಗತ್ತು ಭಾರತವನ್ನು ಒಬ್ಬ ಪ್ರಮುಖ ಪಾಲುದಾರನಾಗಿ ನೋಡುತ್ತಿದೆ. ಹಾಗಾಗಿ ಭಾರತ ಈ ಸುಸಂದರ್ಭನ್ನು ಸರಿಯಾಗಿ ಬಳಸಿಕೊಳ್ಳಬೆಕು. ಹಾಗಾಗಿ ಮುಂಬರುವ ನಮ್ಮ ಹೊಸ ಸರಕಾರದಲ್ಲಿ ಮುಂದಿನ ದಿನಗಳಲ್ಲಿ ಒಂದಷ್ಟು ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲಿದ್ದೇವೆ.

ಸ್ವಾತಂತ್ರ್ಯದ ಈ ಅಮೃತಕಾಲದಲ್ಲಿ ಮುಂದಿನ 5 ವರ್ಷ ಮತ್ತೆ ನಿಮ್ಮ ಸೇವೆ ಮಾಡಲು ಅವಕಾಶ ಕೋರುತ್ತಿದ್ದೇವೆ. ಮುಂದಿನ 5 ವರ್ಷದಲ್ಲಿ ಭಾರತ ವಿಶ್ವದ ಮೂರನೇ ಅರ್ಥಿಕ ಶಕ್ತಿಯಾಗಿ ಬೆಳೆಯಲಿದೆ. ಬಡತನವನ್ನು ಕೊನೆಗಾಣಿಸಲಿದ್ದೇವೆ. ದೇಶ ಅಭಿವೃದ್ಧಿಯ ಹೊಸ ಮೈಲಿಗಲ್ಲನ್ನು ದಾಟಲಿದೆ, ಭ್ರಷ್ಟಾಚಾರದ ವಿರುದ್ಧ ಇನ್ನೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ಇನ್ನೂ ಅನೇಕ ಜನಪರ ನಿರ್ಧಾರವನ್ನು ತೆಗೆದುಕೊಳ್ಳಲಿದ್ದೇವೆ.

ನಮ್ಮ ಸಂಕಲ್ಪ ಪತ್ರ ಕೇವಲ ಭರವಸೆಗಳಲ್ಲ, ಇದು ದೇಶದ ಜನರ ನಿರೀಕ್ಷೆಗಳ ಸಾಮೂಹಿಕ ಅಭಿವ್ಯಕ್ತೀಕರಣ ಮತ್ತು ಇದು ದೇಶದಿಂದ, ದೇಶಕ್ಕಾಗಿ ದೇಶವೇ ನಿರ್ಧರಿಸಿಕೊಂಡ ಗುರಿ. ನೀವೇ ನೋಡಿದಂತೆ ಕಳೆದ ಹತ್ತು ವರ್ಷಗಳಲ್ಲಿ ನಾವು ನೀಡಿದ ಪ್ರತಿ ಭರವಸೆಯನ್ನು ಈಡೇರಿಸಿದ್ದೇವೆ. ಮೋದಿಯ ಗ್ಯಾರಂಟಿ ಇದು.

2014ರಲ್ಲಿ ದೇಶದಲ್ಲಿ ಒಂದ ಸಕಾರಾತ್ಮಕ ಬದಲಾವಣೆ ತರಲು ನಿಮ್ಮ ಬೆಂಬಲ ಸಿಕ್ಕಿತು, 2019ರಲ್ಲಿ ದೇಶದಲ್ಲಿ ಅಭಿವೃದ್ಧಿಯ ಕೆಲಸ ಮಾಡಲು, ಐತಿಹಾಸಿಕ ನಿರ್ಣಯಗಳನ್ನು ತೆಗೆದಕೊಳ್ಳಲು ಹಿಂದಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಸಿಕ್ಕ ನಿಮ್ಮ ಬೆಂಬಲ ಸಾಕಾಯಿತು. ಮುಂದಿನ 5 ವರ್ಷ ನಿಮ್ಮ ಸೇವೆ ಮಾಡಲು ನೀವು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಂಬಲ ಕೊಟ್ಟರೆ ನಾವು 2047ರ ವಿಕಸಿತ ಭಾರತದ ಕನಸನ್ನು ಸಾಕಾರ ಮಾಡಲು ಇನ್ನೂ ಹಚ್ಚಿನ ಶ್ರಮ ಹಾಕಿ ಕೆಲಸ ಮಾಡುತ್ತೇವೆ ಇದು ಮೋದಿಯ ಗ್ಯಾರಂಟಿ.

ಬನ್ನಿ ಎಲ್ಲರೂ ದೇಶದ ಭವಿಷ್ಯದ ತಲೆಮಾರು ಹೆಮ್ಮೆ ಪಡುವಂತಹ ಭಾರತ ಕಟ್ಟೋಣ.

**ವಂದೇ ಮಾತರಂ**

**ನಿಮ್ಮ ಪ್ರಧಾನ ಸೇವಕ**

**ನರೇಂದ್ರ ಮೋದಿ**

# ಅಧ್ಯಕ್ಷೀಯ ನುಡಿ



**ನನ್ನ ಆತ್ಮೀಯ ಸಹೋದರ ಸಹೋದರಿಯರೇ,**

ಬಿಜೆಪಿಗೆ ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಕಣ್ಣೀರು ಒರೆಸಬೇಕೆಂಬ ಗುರಿಯ 'ಅಂತ್ಯೋದಯ'ವೆಂಬುದೇ ಧ್ಯೇಯಪಥ. ಬಿಜೆಪಿ ಸ್ಥಾಪನೆಯಾದಗಿನಿಂದಲೂ ಮಾರ್ಗದಲ್ಲಿಯೇ ಹೆಜ್ಜೆಗಳನ್ನಿಡುತ್ತಿದೆ. ಪ್ರಧಾನಿ ಶ್ರೀ ನರೇಂದ್ರಮೋದಿಯವರು ಬಡವರನ್ನು ಕೇಂದ್ರೀಕರಿಸಿ ಪ್ರಾರಂಭಿಸಿರುವ ವಿವಿಧ ಯೋಜನೆಗಳೇ ಇದಕ್ಕೆ ಸಾಕ್ಷಿ.

ಕೇವಲ ಹತ್ತು ವರ್ಷಗಳಲ್ಲಿ, ನಮ್ಮ ಸರ್ಕಾರವು ಅಸಾಧ್ಯವಾದದ್ದನ್ನು ಸಾಧ್ಯವಾಗಿಸುವ ಮೈಲಿಗಲ್ಲುಗಳನ್ನು ಸಾಧಿಸಿದೆ. ಸಬ್ ಕಾ ಸಾಥ್ ಮತ್ತು ಸಬ್ ಕಾ ಪ್ರಯಾಸ್ ಜೊತೆಗೆ ನಾವು ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಬದ್ಧರಾಗಿದ್ದೇವೆ. ಮತ್ತು ಎಲ್ಲರನ್ನೂ ಶಶಕ್ತಗೊಳಿಸುವ ಮೂಲಕ, ಎಲ್ಲರ ವಿಕಾಸಗೊಳಿಸುವ ಬದ್ಧತೆಯ ಭರವಸೆಯನ್ನು ಬಿಜೆಪಿ ನೀಡುತ್ತಿದೆ. ಅದುವೇ ಮೋದಿ ಗ್ಯಾರಂಟಿಯ 2024 ರ ಸಂಕಲ್ಪ ಪತ್ರವಾಗಿದೆ. ಈ ಸಂಕಲ್ಪ ಪತ್ರವು ಪ್ರಗತಿಯನ್ನು ಮುಂದುವರೆಸುವ ಸಂಕಲ್ಪದ ಮುಂದುವರೆದ ಪ್ರಯಾಣವಾಗಿದೆ.

ಭಾರತವೀಗ ಅಮೃತ ಕಾಲದ ಹೊಸ್ತಿಲಲ್ಲಿದ್ದು, ನಮ್ಮ ಮುಂದೆ ಹೊಸದಾದ ದೃಷ್ಟಿಕೊನವಿದೆ. ಅದುವೆ ನಮ್ಮ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಘೋಷಿಸಿರುವ ಪಂಚ ಪ್ರಣಾದ ದೃಷ್ಟಿಕೋನ. 2024 ರ ಈ ಸಾರ್ವತ್ರಿಕ ಚುನಾವಣೆ ನಮ್ಮ ಹಾದಿಯನ್ನು ರೂಪಿಸುವಲ್ಲಿ ನಿರ್ಣಾಯಕವಾಗಿರುತ್ತದೆ. ದೇಶದ ನಾಗರೀಕರು ಪ್ರಗತಿಯ ಪಥದತ್ತ ಸಾಗಲು ಬಯಸಿದ್ದು, ದೇಶವನ್ನು ಹೊಸ ದೃಷ್ಟಿಕೋನದಲ್ಲಿ ಕಾಣಲು ಮನಸು ಮಾಡಿದ್ದಾರೆ. ಆ ನಿಟ್ಟಿನಲ್ಲಿ ದೇಶದ 97 ಕೋಟಿ ಮತದಾರರು ಭ್ರಷ್ಟ ಮೈತ್ರಿಕೂಟಗಳನ್ನು ಸೋಲಿಸಲು ನಿರ್ಧರಿಸಿದ್ದಾರೆ.

ಕೇವಲ ಹತ್ತು ವರ್ಷಗಳಲ್ಲಿ, ದುರ್ಬಲ ಆರ್ಥಿಕ ದೇಶಗಳ ಪಟ್ಟಿಯಲ್ಲಿ 5 ನೇ ಸ್ಥಾನದಲ್ಲಿದ್ದ ಭಾರತವನ್ನು, ಮುಂದುವರೆದ ಆರ್ಥಿಕ ದೇಶಗಳ ಪಟ್ಟಿಯಲ್ಲಿ 5 ನೇ ಸ್ಥಾನಕ್ಕೇರಿಸಲು ನಾವೆಲ್ಲರೂ ಶ್ರಮಿಸಿದ್ದೇವೆ. ಜೊತೆಗೆ ನಾವಿಂದು ಸುರಕ್ಷಿತವಾಗಿದ್ದೇವೆ, ಏಕೆಂದರೆ ನಾವು ನಿರ್ಣಾಯಕ ಮತ್ತು ಧೈರ್ಯಶಾಲಿ ನೇತೃತ್ವವನ್ನು ಹೊಂದಿದ್ದೇವೆ. ನಾವಿಂದು ವಿಶ್ವ ದರ್ಜೆಯ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುತ್ತಿದ್ದೇವೆ, ಏಕೆಂದರೆ ನಾವು ದೀರ್ಘಾವಧಿಯ ದೃಷ್ಟಿಕೋನದಲ್ಲಿ ನಂಬಿಕೆಯಿರುವ ನಾಯಕನನ್ನು ಹೊಂದಿದ್ದೇವೆ. ನಾವು ಸಾಮರಸ್ಯದ, ಸಮಾನ ಸಮಾಜವನ್ನು ನಿರ್ಮಿಸುತ್ತಿದ್ದೇವೆ. ಏಕೆಂದರೆ ನಾವು ಕಾಳಜಿ ವಹಿಸುವ ನಾಯಕನನ್ನು ಹೊಂದಿದ್ದೇವೆ. ಆದ್ದರಿಂದ ಈ ಎಲ್ಲಾ ಕ್ಷೇತ್ರಗಳಿಗೆ ಮತ್ತು 140 ಕೋಟಿ ನಾಗರೀಕರಿಗೆ ಮೋದಿ ಗ್ಯಾರಂಟಿ ಬೆಳಕಾಗಿದೆ.

ನಾವು ನಮ್ಮ ಶ್ರೀಮಂತ ಪರಂಪರೆ ಮತ್ತು ವೈವಿಧ್ಯಮಯ ಸಂಸ್ಕೃತಿಯನ್ನು ಗೌರವಿಸಿದ್ದೇವೆ. ಅದರ ಪರಿಣಾಮವೇ ಅಯೋಧ್ಯೆಯಲ್ಲಿ ನಿರ್ಮಾಣವಾದ ಭವ್ಯ ರಾಮ ಮಂದಿರ. ಅಲ್ಲದೆ ದೇಶದಾದ್ಯಂತ ನಮ್ಮ ಸಾಂಸ್ಕೃತಿಕ ಮತ್ತು ಧಾರ್ಮಿಕ ತಾಣಗಳನ್ನು ಪುನರುತ್ಥಾಗೊಳಿಸಲಾಗುತ್ತಿದೆ. ಇದು ಸಮಾಜದಲ್ಲಿ ನವ ಚೈತನ್ಯ ಮೂಡಿಸಿದೆ. ನಮ್ಮ ಇತಿಹಾಸ ಮತ್ತು ಪರಂಪರೆಯು ನಮ್ಮ ಯುವಕರಲ್ಲಿ ಹೊಸ ಆಸ್ತಕಿಯನ್ನು ಮೂಡಿಸುತ್ತಿದೆ.

ಭಾರತಕ್ಕೆ ಮುಂಚೂಣಿ ಸ್ಥಾನ ನೀಡುವ ನಾಯಕ ನಮ್ಮಲ್ಲಿರುವ ಪರಿಣಾಮ ಇಂದು ಎಲ್ಲಾ ಜಾಗತಿಕ ವೇದಿಕೆಗಳಲ್ಲಿ ನಮ್ಮ ಸಹಭಾಗಿತ್ವವನ್ನು ಗೌರವದಿಂದ ಕಾಣುತ್ತಿದ್ದಾರೆ. ಅಂತರಾಷ್ಟ್ರೀಯ ವ್ಯವಹಾರಗಳಿಗೆ ನಮ್ಮ ದೇಶ ವಿಶ್ವಾಸಾರ್ಹ ದೇಶವಾಗಿದೆ. ನಮ್ಮ ದೇಶದಲ್ಲಿ ತಂತ್ರಜ್ಞಾನಗಳ ಹೊಸ ಆವಿಷ್ಕಾರಕ್ಕೆ ನಾಂದಿ ಹಾಡುತ್ತಿದ್ದೇವೆ.

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2014 ರಿಂದ ನಮ್ಮ ಆಕಾಂಕ್ಷೆಗಳನ್ನು, ನಮ್ಮ ಕನಸುಗಳನ್ನು ಈಡೇರಿಸುತ್ತಿದ್ದಾರೆ. ಹತ್ತು ವರ್ಷಗಳ ನಂತರ ಈಗ ನಾವೆಲ್ಲರೂ ಕಂಡಿರುವ ಕನಸಾದ ವಿಕಸಿತ ಭಾರತದ ಸಹಕಾರಕ್ಕೆ ಮತ್ತೊಮ್ಮೆ ನಿಮ್ಮ ಮತವನ್ನು ಬಿಜೆಪಿ ನೀಡಿ, ಮೋದಿಜಿಯವರನ್ನು ಭಾರಿ ಬಹುಮತದಿಂದ ಆಯ್ಕೆಗೊಳಿಸಲು ತಮ್ಮೆಲ್ಲರ ಸಂಪೂರ್ಣ ಬೆಂಬಲ ಬೇಕಿದೆ.

ವಂದೇ ಮಾತರಂ,



**ಜಗತ್ ಪ್ರಕಾಶ್ ನಡ್ಡಾ**

ರಾಷ್ಟ್ರೀಯ ಅಧ್ಯಕ್ಷರು, ಬಿಜೆಪಿ

# ಅಧ್ಯಕ್ಷೀಯ ನುಡಿ



"

ನನ್ನ ಆತ್ಮೀಯ ಪ್ರಜಾ ಬಂಧುಗಳೇ,

ಭಾರತೀಯ ಜನತಾ ಪಾರ್ಟಿಯ ಲೋಕಸಭೆ ಚುನಾವಣೆ–2024 ರ ಸಂಕಲ್ಪ ಪತ್ರ ಬಿಡುಗಡೆಯಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ದೇಶಕ್ಕೊಂದು ಹೊಸ ದೃಷ್ಟಿಕೋನದ ಭರವಸೆಯ ದಿಕ್ಕನ್ನು ತೋರಿಸಿದ್ದಾರೆ. ದೇಶದ ಆತ್ಮ ಗೌರವವನ್ನು ಹೆಚ್ಚಿಸುವುದರ ಜೊತೆಗೆ, ಸುರಕ್ಷಿತ ಮತ್ತು ಸಾಂಸ್ಕೃತಿಕ ಭಾರತದ ಮೌಲ್ಯವನ್ನು ಎತ್ತಿ ಹಿಡಿಯುವಲ್ಲಿ ಯಶಸ್ವಿಯಾದ ಸಮರ್ಥ ನೇತೃತ್ವ ನಮ್ಮ ಮುಂದಿದೆ.

ಹಿಂದಿನ 10 ವರ್ಷಗಳಲ್ಲಿ ಬಿಜೆಪಿ ತನ್ನ ಸಂಕಲ್ಪ ಪತ್ರ ಪ್ರತಿಯೊಂದು ಅಂಶಗಳನ್ನು ಜಾರಿಗೆ ತಂದಿದೆ. ರಾಮ ಮಂದಿರ, ಆರ್ಟಿಕಲ್ 370, ಸಿಎಎ ಒಂದೆಡೆಯಾದರೆ, ಭಯೋತ್ಪಾದನೆ ನಿರ್ಮೂಲನೆ, ದೇಶದ ಸುರಕ್ಷತೆ, ಸಾಂಸ್ಕೃತಿಯ ಪುನರುತ್ಥಾನ ಹೀಗೆ ಎಲ್ಲವನ್ನು, ಎಲ್ಲರನ್ನೂಳಗೊಂಡ ವಿಕಾಸದ ಪ್ರತಿಫಲ ಸಾಕ್ಷಿಯಾಗಿ ನಮ್ಮ ಮುಂದಿದೆ.

ದೇಶದ ನಾಲ್ಕು ಆಧಾರ ಸ್ಥಂಭಗಳಾದ ಯುವ ಶಕ್ತಿ, ಮಹಿಳಾ ಶಕ್ತಿ, ಬಡವರು ಮತ್ತು ರೈತರಿಗೆ ಶಕ್ತಿ ತುಂಬುವಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಬದ್ಧತೆಯನ್ನು ತೋರಿದೆ. ಬಡವರಿಗೆ ಉಚಿತ ಆಹಾರ ಧಾನ್ಯಗಳ ವಿತರಣೆ, ರೈತರಿಗೆ ವಾರ್ಷಿಕ 6 ಸಾವಿರ ಸಹಾಯಧನ, ಕೋವಿಡ್ ಯಶಸ್ವಿ ನಿರ್ವಹಣೆ ಮತ್ತು ಉಚಿತ ಲಸಿಕೆ ವಿತರಣೆ, ಸ್ವಚ್ಛಭಾರತ, ಶೌಚಾಲಯ ನಿರ್ಮಾಣ ಹೀಗೆ ನೂರಾರು ಯಶಸ್ವಿ ಯೋಜನೆ ಮತ್ತು ಯೋಚನೆಗಳನ್ನು ದೇಶದ ಜನತೆಗೆ ನೀಡಿದ್ದಾರೆ. ಅಲ್ಲದೆ ಸಂಕಷ್ಟದ ಸಮಯದಲ್ಲೂ ದೇಶದ ಜನರ ಜೊತೆಗೆ ಬಲವಾಗಿ ನಿಂತು ಭರವಸೆ ತುಂಬಿದ್ದಾರೆ. ಜಾಗತಿಕಮಟ್ಟದಲ್ಲಿ ಭಾರತ ಘನತೆ ಗೌರವಗಳನ್ನು ಎತ್ತಿ ಹಿಡಿದಿದ್ದಾರೆ.

ಒಟ್ಟಾರೆ ಕಳೆದ 10 ವರ್ಷಗಳಲ್ಲಿ ಭವಿಷ್ಯದ ಭವ್ಯ ಭಾರತಕ್ಕೊಂದು ಭಾಷ್ಯ ಬರೆದಿದೆ. ಶ್ರೀ ನರೇಂದ್ರ ಮೋದಿ ನಾಯಕತ್ವದ ಕೇಂದ್ರದ ಬಿಜೆಪಿ ಸರ್ಕಾರ. ಅದರ ಮುಂದುವರೆದ ಪ್ರಯಾಣದ ಭಾಗವೇ ಈ ಸಲದ ಸಂಕಲ್ಪ ಪತ್ರ. ಅಮೃತ ಕಾಲಘಟ್ಟದಲ್ಲಿರುವ ಈ ಸಂದರ್ಭದಲ್ಲಿ ಧೈರ್ಯಶಾಲಿ, ನಂಬಿಕೆ, ಕಾಳಜಿ ಹೊಂದಿರುವ ಸಮರ್ಥ ನೇತೃತ್ವದ ಮೋದಿ ಗ್ಯಾರಂಟಿ ನಮ್ಮ ಮುಂದಿದೆ.

ವಿಕಸಿತ ಭಾರತದ ದೃಷ್ಟಿಕೋನ ದೇಶದ ಜನರಲ್ಲಿ, ಯುವಕರಲ್ಲಿ ಹೊಸ ಚೈತನ್ಯವನ್ನು ತುಂಬಿಸಿದೆ. ಹಿಂದಿನ ಹತ್ತು ವರ್ಷಗಳಲ್ಲಿ ಸಾಧಿಸಿದ ಸಾಧನೆಗಳ ಆತ್ಮವಿಶ್ವಾಸ ನಮ್ಮೊಂದಿಗಿದೆ. ಭವಿಷ್ಯದ ಭಾರತದ ಪರಿಕಲ್ಪನೆಯ ಸಂಕಲ್ಪ ಪತ್ರದ ಮೂಲಕ ನಮ್ಮೆದುರಿದೆ.

ನಮ್ಮೆಲ್ಲರ ಕನಸಾದ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2014 ರಿಂದಲೂ ಅಸಾಧ್ಯವಾದದ್ದನ್ನು ಸಾಧಿಸಿ ತೋರಿಸುತ್ತಲೇ ಬಂದಿದ್ದಾರೆ. ಈಗ ನಾವೆಲ್ಲರೂ ಕಂಡಿರುವ ಕನಸಾದ ಸುರಕ್ಷಿತ, ಸಾಂಸ್ಕೃತಿಕ, ವಿಕಸಿತ ಭಾರತದ ಮುಂದುವರೆದ ಪಯಣಕ್ಕೆ ಮೋದಿಯೊಂದಿಗೆ ನಾವೆಲ್ಲರೂ ಜೊತೆಯಾಗಿ ಸಾಗಬೇಕಿದೆ. ಅದಕ್ಕೆ ಮತ್ತೊಮ್ಮೆ ನಿಮ್ಮ ಮತವನ್ನು ಬಿಜೆಪಿಗೆ ನೀಡಿ ಮೋದಿಯವರನ್ನು ಭಾರಿ ಬಹುಮತದಿಂದ ತರಲು ಸಂಪೂರ್ಣ ಬೆಂಬಲ ಬೇಕಿದೆ. ನಮ್ಮ ರಾಜ್ಯದ ಎಲ್ಲಾ ಎನ್.ಡಿ.ಎ ಸಂಸದರನ್ನು ಆಯ್ಕೆಗೊಳಿಸಿ ಮೋದಿಗೆ ಹೆಚ್ಚಿನ ಬಲ ನೀಡಲು ನಿಮ್ಮ ಸಹಕಾರ ಬೇಕಿದೆ.

ವಂದೇ ಮಾತರಂ,

**ಬಿ.ವೈ.ವಿಜಯೇಂದ್ರ**

ರಾಜ್ಯ ಅಧ್ಯಕ್ಷರು, ಬಿಜೆಪಿ



# ಬಡಜನರ ಸಬಲೀಕರಣ

- **ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆ**ಯಡಿಯಲ್ಲಿ ಮುಂದಿನ 5 ವರ್ಷಗಳವರಗೆ **ಉಚಿತ ಪಡಿತರ** ನೀಡುವುದನ್ನು ಮುಂದುವರಿಕೆ.



- ತರಕಾರಿಗಳು ಮತ್ತು ಬೇಳೆಕಾಳುಗಳಿಗೆ **ಬೆಲೆ ಸ್ಥಿರತೆ ನಿಧಿ ಸ್ಥಾಪನೆ.** ಬೇಳೆಕಾಳುಗಳು, ಖಾದ್ಯ ತೈಲಗಳು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ **ಆತ್ಮನಿರ್ಭರತೆಗೆ ಕ್ರಮ.**



- **ಆಯುಷ್ಮಾನ್ ಭಾರತ್ ಯೋಜನೆ**ಯಡಿ ಬಡ ಕುಟುಂಬಗಳಿಗೆ ರೂ 5 ಲಕ್ಷದವರೆಗೆ **ಉಚಿತ ಗುಣಮಟ್ಟದ ಆರೋಗ್ಯ ಚಿಕಿತ್ಸೆ** ವಿಸ್ತರಣೆ.



- **ಪಿಎಂ ಆವಾಸ್ ಯೋಜನೆ**ಯಡಿಯಲ್ಲಿ ಇನ್ನೂ ಹೆಚ್ಚಿನ ಕುಟುಂಬಗಳು ಈ ಯೋಜನೆಯ ಪ್ರಯೋಜನ ಪಡೆಯಲು ಪಿಎಂ ಆವಾಸ್ ಯೋಜನೆಯ ವಿಸ್ತರಣೆ.



- ಪ್ರತಿ ಹಳ್ಳಿ, ಪಟ್ಟಣ, ನಗರಗಳಲ್ಲಿನ ಪ್ರತಿಯೊಂದು ಮನೆಗಳಿಗೂ **ನಲ್ಲಿ ಮೂಲಕ ಶುದ್ಧ ಕುಡಿಯುವ ನೀರಿನ ಸಂಪರ್ಕ**ದಲ್ಲಿ ನೀರು ಪೋಲಾಗುವುದನ್ನು ತಡೆಯಲು ತಂತ್ರಜ್ಞಾನ ಬಳಕೆ.



- **ಪ್ರಧಾನಮಂತ್ರಿ ಸೂರ್ಯ ಘರ್** ಉಚಿತ ವಿದ್ಯುತ್ ಯೋಜನೆಯಡಿ ಬಡವರ ಮನೆಗಳಿಗೆ **ಉಚಿತ ವಿದ್ಯುತ್ ಸಂಪರ್ಕ.**

- ಕೊಳಗೇರಿ ಉತ್ತಮ ಗುಣಮಟ್ಟದ ಮನೆಗಳನ್ನು ಕೊಳಗೇರಿ ಪ್ರದೇಶದಲ್ಲಿ ನಿರ್ಮಿಸಲು ಹೊಸ ನೀತಿಗಳ ಜಾರಿ. **ಪ್ರಧಾನಮಂತ್ರಿ ಉಜ್ವಲ ಯೋಜನೆ** ಇನ್ನಷ್ಟು ವಿಸ್ತರಣೆ.






# ಮಧ್ಯಮ ವರ್ಗಕ್ಕೆ ಮೋದಿ ಗ್ಯಾರಂಟಿ

- ಕಳೆದ 10 ವರ್ಷಗಳಲ್ಲಿ **ದೇಶದ ನಾಗರಿಕರ ಆದಾಯದ ಹೆಚ್ಚಳದ** ಮೂಲಕ ಹೆಚ್ಚಿನ ಸಂಖ್ಯೆಯ ಬಡ ಕುಟುಂಬಗಳು ಮಧ್ಯಮ ವರ್ಗದ ಸಾಲಿಗೆ ಸೇರುತ್ತಿವೆ. ಈ ಕುಟುಂಬಗಳಿಗೆ **ವಸತಿ, ಆರೋಗ್ಯ ರಕ್ಷಣೆ, ಗುಣಮಟ್ಟದ ಶಿಕ್ಷಣ** ಮತ್ತು ಸಾಕಷ್ಟು **ಉದ್ಯೋಗಾವಕಾಶ** ಕಲ್ಪಿಸುವುದಕ್ಕೆ ಆದ್ಯತೆ.
- ಭಾರತದಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರವನ್ನು ಹಿಂದೆಂದಿಗಿಂತಲೂ ಹೆಚ್ಚು ಪಾರದರ್ಶಕ ಮತ್ತು ನಾಗರಿಕ ಸ್ನೇಹಿಯನ್ನಾಗಿಸಲು ನೆರವಾದ **ರೇರಾ ಕಾಯ್ದೆಗೆ ಮತ್ತಷ್ಟು ಶಕ್ತಿ.**
- ದೇಶದ ಎರಡನೇ, ಮೂರನೇ ಶ್ರೇಣಿ ನಗರಗಳಲ್ಲಿ ಸ್ಟಾರ್ಟ್‌ಅಪ್‌ಗೆ ಪೂರಕವಾದ ವಾತಾವರಣ ನಿರ್ಮಾಣ, **ಪ್ರವಾಸಿ ಹಬ್‌ಗಳ ನಿರ್ಮಾಣದ** ಮೂಲಕ ವಿವಿಧ ರೀತಿಯ **ಉದ್ಯೋಗಾವಕಾಶ**ಗಳ ಸೃಷ್ಟಿ.
- **ಏಮ್ಸ್** ಮತ್ತು **ಆಯುಷ್ಮಾನ್** ಆರೋಗ್ಯ ಸೇವಾ ಜಾಲ ವಿಸ್ತರಣೆ.




- ನಮ್ಮ ವಿಶ್ವವಿದ್ಯಾಲಯಗಳನ್ನು ಅಂತಾರಾಷ್ಟ್ರೀಯ ಮಟ್ಟದ ಗುಣಮಟ್ಟಕ್ಕೆ ಏರಿಸಲು ಇನ್ನಷ್ಟು ಸಂಖ್ಯೆಯಲ್ಲಿ **ಐಐಟಿ, ಐಐಎಂ,** ಹಾಗೂ **ಏಮ್ಸ್‌ಗಳ ಸ್ಥಾಪನೆ.** ಪಠ್ಯ ಶಿಕ್ಷಣದ ಜತೆಗೆ ಪ್ರಾಯೋಗಿಕ ಶಿಕ್ಷಣ, **ದುಡಿಮೆಯೊಂದಿಗೆ ಕಲಿಕೆ** ಕಾರ್ಯಕ್ರಮ ಆರಂಭ.
- ರಸ್ತೆ ಜಾಲ, ರೈಲ್ವೇ ಹಾಗೂ ಮೆಟ್ರೋ ಮಾರ್ಗ ವಿಸ್ತರಣೆ ಮತ್ತು ಆಧುನಿಕ ತಂತ್ರಜ್ಞಾನ ಹೊಂದಿರುವ ರೈಲುಗಳ ಆರಂಭ, **ಎಲೆಕ್ಟ್ರಿಕ್ ಚಾರ್ಜಿಂಗ್ ಸ್ಟೇಷನ್**ಗಳ ನಿರ್ಮಾಣ, ಹೊಸ **ವಿಮಾನ ನಿಲ್ದಾಣ**ಗಳ ನಿರ್ಮಾಣ, ಕೈಗೆಟುಕುವ ದರದಲ್ಲಿ **5ಜಿ** ಹಾಗೂ **6ಜಿ** ಸಂಪರ್ಕ.
- **ಹಸಿರು ಪ್ರದೇಶ ವಿಸ್ತರಣೆ,** ನದಿಮೂಲಗಳ ಶುದ್ಧೀಕರಣ, ಸ್ವಾಭಾವಿಕ ಸಂಪನ್ಮೂಲಗಳ ಸದ್ಬಳಕೆ, ಜನಸ್ನೇಹಿ ನಗರಗಳ ನಿರ್ಮಾಣ.



# ನಾರಿ ಶಕ್ತಿ ಸಬಲೀಕರಣಕ್ಕಾಗಿ ಮೋದಿ ಗ್ಯಾರಂಟಿ

- **3 ಕೋಟಿ ಗ್ರಾಮೀಣ** ಮಹಿಳೆಯರಿಗೆ **ಲಕ್ ಪತಿ ದೀದಿ**ಗಳಾಗಲು ಅವಕಾಶ.
- ಸೇವಾ ವಲಯದಲ್ಲಿ ವಹಿಳಾ ಸ್ವಸಹಾಯ ಗುಂಪುಗಳ ಸಂಯೋಜನೆ, ಐಟಿ, ಆರೋಗ್ಯ, ಶಿಕ್ಷಣ, ಚಿಲ್ಲರೆ ವ್ಯಾಪಾರ ಮತ್ತು ಪ್ರವಾಸೋದ್ಯಮದಂತಹ ಪ್ರಮುಖ ಸೇವಾ ಕ್ಷೇತ್ರಗಳಲ್ಲಿ **ಮಹಿಳಾ ಸ್ವ-ಸಹಾಯ ಗುಂಪುಗಳ ಸಂಯೋಜನೆ.**
- **ಮಹಿಳಾ ಸ್ವ ಸಹಾಯ ಸಂಘಗಳಿಗೆ ಮಾರುಕಟ್ಟೆ ಒದಗಿಸುವುದು:** ಒಂದು ಜಿಲ್ಲೆ ಒಂದು ಉತ್ಪನ್ನ **(ODOP)**, ರೈತ ಉತ್ಪಾದಕ ಸಂಸ್ಥೆಗಳು **(FPOs)**, ಏಕತಾ ಮಾಲ್, **ONDC, GEM,** ಒಂದು ಸ್ಟೇಷನ್ ಒಂದು ಉತ್ಪನ್ನದಂತಹ ಉಪಕ್ರಮಗಳ ಮೂಲಕ ಸ್ವ-ಸಹಾಯ ಸಂಘದ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಅವಕಾಶ.
- ಕ್ರೀಡೆಯಲ್ಲಿ ಮಹಿಳಾ ಕೇಂದ್ರಿತ ಕಾರ್ಯಕ್ರಮಗಳು ಮತ್ತು ಹೆಚ್ಚಿನ ಸೌಲಭ್ಯಗಳನ್ನು ನೀಡುವ ಮೂಲಕ **ಮಹಿಳಾ ಕ್ರೀಡಾ ಪಟುಗಳಿಗೆ ಉತ್ತೇಜನ.**
- **ಉದ್ಯೋಗಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ** ಪೂರಕ ವಾತಾವರಣ ನಿರ್ಮಾಣ, ಮೂಲಸೌಕರ್ಯಗಳನ್ನು ಕಲ್ಪಿಸುವ ಮೂಲಕ ಉದ್ಯೋಗಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ವಾತಾವರಣ ನಿರ್ಮಾಣ.
- ಮಹಿಳೆಯರಿಗಾಗಿ **ಸಾರ್ವಜನಿಕ ಶೌಚಾಲಯಗಳ ನಿರ್ಮಾಣ** ಹಾಗೂ ನಿರ್ವಹಣೆ.
- ಮಹಿಳೆಯರ **ಆರೋಗ್ಯ** ಮತ್ತು **ಯೋಗಕ್ಷೇಮಕ್ಕೆ** ಆದ್ಯತೆ.
- **ನಾರಿ ಶಕ್ತಿ ವಂದನೆ** ಅಧಿನಿಯಮದ ಅನುಷ್ಠಾನ.
- **ಶಕ್ತಿ ಮಹಿಳಾ ಸಹಾಯ ಕೇಂದ್ರಗಳ ಬಲಪಡಿಸುವಿಕೆ,** ಪೊಲೀಸ್ ಠಾಣೆಗಳಲ್ಲಿ ಶಕ್ತಿ ಡೆಸ್ಕ್ ಗಳ (ಮಹಿಳಾ ಸಹಾಯ ಕೇಂದ್ರಗಳು) ತನಿಖೆ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಶಕ್ತಿ ಕೇಂದ್ರಗಳನ್ನು ಮತ್ತಷ್ಟು ಬಲವರ್ಧನೆ.
- **ತುರ್ತು ಸಹಾಯವಾಣಿ** 112ರ ಸಾಮರ್ಥ್ಯದ ಹೆಚ್ಚಳ.



# ಯುವ ಜನತೆಗೆ ಮೋದಿ ಗ್ಯಾರಂಟಿ

- **ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗೆ** ಕಾನೂನು ಜಾರಿ
- ನಾಗರಿಕ ಸೇವಾ **ಪರೀಕ್ಷೆಗಳಲ್ಲಿ ಪಾರದರ್ಶಕತೆ.**
- ಅಮೃತ ಪೀಳಿಗೆ, ರಾಷ್ಟ್ರ ನಿರ್ಮಾಣದಲ್ಲಿ ಯುವ ಜನರಿಗೆ ಹೆಚ್ಚಿನ ಅವಕಾಶ, ದೇಶಕಟ್ಟಲು ನಮ್ಮ ಯುವಶಕ್ತಿಯನ್ನು ಬಳಸಿಕೊಳ್ಳುವ ಸಲುವಾಗಿ ನಾವು **ಮೇರಾ ಯುವ ಭಾರತ್** **(MY Bharat)** ಪೋರ್ಟಲ್ ಯುವಜನರಲ್ಲಿ **ನಾಯಕತ್ವದ ಗುಣ, ಕೌಶಲ್ಯ ಮತ್ತು ಸೇವಾ ಮನೋಭಾವವ ನಿರ್ಮಾಣ.**
- ಸ್ಟಾರ್ಟ್‌ಅಪ್‌ಗೆ ಪೂರಕ ವಾತಾವರಣ ನಿರ್ಮಾಣ, ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು **ಇನ್ಕ್ಯುಬೇಟರ್ ನೆಟ್ವರ್ಕ್ ವಿಸ್ತರಣೆ,** ಖಾಸಗಿ ವಲಯ ಮತ್ತು ವಿಶ್ವವಿದ್ಯಾಲಯಗಳೊಂದಿಗೆ ಸಮನ್ವಯತೆ ಸಾಧಿಸುವ ವಿಧಾನ ಅನುಸರಣೆ.
- **ಸ್ಟಾರ್ಟ್‌ಅಪ್‌ಗಳಿಗೆ ಧನ ಸಹಾಯ ವಿಸ್ತರಣೆ,** ಈಗ ಅಸ್ತಿತ್ವದಲ್ಲಿರುವ **ಸ್ಟಾರ್ಟ್‌ಅಪ್ ಇಂಡಿಯಾ ಸೀಡ್ ಫಂಡ್ ಯೋಜನೆ** ಮತ್ತು **ಸ್ಟಾರ್ಟ್‌ಅಪ್ ಕ್ರೆಡಿಟ್ ಗ್ಯಾರಂಟಿ ಯೋಜನೆಯನ್ನು** ಜಾರಿ.
- **ಸ್ಟಾರ್ಟ್‌ಅಪ್‌ಗಳಿಗೆ ಮಾರ್ಗದರ್ಶನ,** ಸ್ಟಾರ್ಟ್‌ಅಪ್‌ಗಳಿಗೆ ಜಾಗತಿಕವಾಗಿ ಗುರುತಿಸಲ್ಪಟ್ಟ ಮಾರ್ಗದರ್ಶಕರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಅವಕಾಶ ವಿಸ್ತರಣೆ.
- ರಕ್ಷಣಾ ಮತ್ತು ರೈಲ್ವೆ ಖರೀದಿಗಳಲ್ಲಿ ಕೈಗೊಂಡ ಉಪಕ್ರಮಗಳ ಮಾದರಿಯಲ್ಲೇ **ಸರ್ಕಾರಿ ಖರೀದಿಯಲ್ಲಿ ಸ್ಟಾರ್ಟ್‌ಅಪ್‌ಗಳ ಭಾಗವಹಿಸುವಿಕೆಯನ್ನು** ಉತ್ತೇಜಿಸಲು ಬಲವಾದ ನೀತಿ.
- ಉತ್ಪಾದನಾ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಹೆಚ್ಚಳ, ಭಾರತವನ್ನು **ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ** ಮಾಡುವ ನಿಟ್ಟಿನಲ್ಲಿ ಹೆಜ್ಜೆ.
- ಮೂಲಸೌಕರ್ಯ ಕ್ಷೇತ್ರದಲ್ಲಿ ಹೂಡಿಕೆ ಮೂಲಕ **ಉದ್ಯೋಗ ಸೃಷ್ಟಿ**
- ಮೌಲ್ಯಯುತ ಸೇವೆಗಳಿಗಾಗಿ ಜಾಗತಿಕ ಕೇಂದ್ರಗಳ ಸ್ಥಾಪನೆ, ಹೆಚ್ಚುವರಿ **ಜಾಗತಿಕ ಸಾಮರ್ಥ್ಯ ಕೇಂದ್ರಗಳು** (ಜಿಸಿಸಿಗಳು), **ಗ್ಲೋಬಲ್ ಟೆಕ್ ಕೇಂದ್ರಗಳು** (ಜಿಟಿಸಿಗಳು) ಮತ್ತು **ಜಾಗತಿಕ ಎಂಜಿನಿಯರಿಂಗ್ ಕೇಂದ್ರಗಳನ್ನು** (ಜಿಇಸಿ) ಸ್ಥಾಪನೆ. ಯುವ ಉದ್ಯಮಿಗಳು ತಮ್ಮ ಉದ್ಯಮಗಳನ್ನು ಪ್ರಾರಂಭಿಸಲು, ಉಳಿಸಿಕೊಳ್ಳಲು ಮತ್ತು ಬೆಂಬಲಿಸಲು **ಮುದ್ರಾ**ದಂತಹ **ಸಾಲ ಸೌಲಭ್ಯ** ಯೋಜನೆ ವಿಸ್ತರಣೆ. ಮುದ್ರಾ **ಸಾಲದ ಮಿತಿಯನ್ನು 20ಲಕ್ಷ ರೂ.**ಗಳಿಗೆ ಹೆಚ್ಚಳ.
- ಉದ್ಯೋಗ ಸೃಷ್ಟಿಗಾಗಿ **ಪ್ರವಾಸೋದ್ಯಮ ಕೇಂದ್ರಗಳ ಅಭಿವೃದ್ಧಿ.**




# ಹಿರಿಯ ನಾಗರಿಕರಿಗೆ ಮೋದಿ ಗ್ಯಾರಂಟಿ

- ಹಿರಿಯ ನಾಗರಿಕರಿಗೆ **ಆಯುಷ್ಮಾನ್ ಯೋಜನೆ** ವಿಸ್ತರಣೆ.
- ಹಿರಿಯರ ಬುದ್ಧಿವಂತಿಕೆ ಮತ್ತು ಅನುಭವವನ್ನು ಗೌರವಿಸಲು **ರಾಷ್ಟ್ರೀಯ ಹಿರಿಯ ನಾಗರಿಕರ ಪೋರ್ಟಲ್** ಪ್ರಾರಂಭ.
- ಹಿರಿಯ ನಾಗರಿಕರಿಗೆ ಸಾಮಾಜಿಕ ಭದ್ರತಾ ಪ್ರಯೋಜನಗಳು ಮತ್ತು ಇತರ **ಅಗತ್ಯ ಸರ್ಕಾರಿ ಸೇವೆಗಳು ಹಿರಿಯ ನಾಗರೀಕರ ಮನೆ ಬಾಗಿಲಿಗೆ.**
- **ಹಿರಿಯ ನಾಗರೀಕರಿಗೆ ಡಿಜಿಟಲ್ ಸಬಲೀಕರಣ,** UPI ಮತ್ತು ಇತರ ಆನ್‌ಲೈನ್ ಪಾವತಿ ವಿಧಾನಗಳನ್ನು ಬಳಸುವಲ್ಲಿ ಸಮಗ್ರ ತರಬೇತಿ.
- ಹಿರಿಯರ ಜೀವನ ಮತ್ತು ಚೈತನ್ಯವನ್ನು ಉತ್ತೇಜಿಸಲು ಆಯುರ್ವೇದ, ಯೋಗ ಮತ್ತು ಇತರ ಸಾಂಪ್ರದಾಯಿಕ ವಿಧಾನಗಳಲ್ಲಿ ಬೇರೂರಿರುವ ಸಮಗ್ರ ಆರೋಗ್ಯ ಪರಿಹಾರಗಳನ್ನು ಒದಗಿಸಲು ನಿಯಮಿತವಾಗಿ **ಆಯುಷ್ ಶಿಬಿರಗಳ ಆಯೋಜನೆ.**
- ಹಿರಿಯ ನಾಗರಿಕರಿಗೆ ಸಂಚಾರ ಮತ್ತು ಪ್ರಯಾಣದ ಸ್ವಾತಂತ್ರ್ಯವನ್ನು ಸುಲಭಗೊಳಿಸಲು ನಾವು **ವಯೋಸ್ನೇಹಿ ಮೂಲಸೌಕರ್ಯ** ಮತ್ತು **ಸಾರಿಗೆ ವ್ಯವಸ್ಥೆ.**
- ಹಿರಿಯ ನಾಗರಿಕರಿಗೆ ಪ್ರಯಾಣ, ವಸತಿ ಮತ್ತು ಇತರ ಸೌಲಭ್ಯಗಳನ್ನು ಒಳಗೊಂಡಂತೆ **ತೀರ್ಥ ಯಾತ್ರೆಗೆ ಅನುಕೂಲವಾಗುವಂತೆ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕ್ರಮ.**




## ಕಿಸಾನ್ ಸಮ್ಮಾನ್‌ಗೆ ಮೋದಿ ಗ್ಯಾರಂಟಿ

- ರೈತರಿಗೆ ನಿರಂತರವಾಗಿ ಆರ್ಥಿಕ ಬೆಂಬಲ ನೀಡಲು **ಪಿಎಂ ಕಿಸಾನ್ ಯೋಜನೆ** ವಿಸ್ತರಣೆ.
- **ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ** ಇನ್ನಷ್ಟು ಶಕ್ತಿ.
- ಪ್ರಮುಖ ಬೆಳೆಗಳ **ಕನಿಷ್ಠ ಬೆಂಬಲ ಬೆಲೆಯನ್ನು** ಕಾಲಕಾಲಕ್ಕೆ ಹೆಚ್ಚಳದ ನೀತಿ ಮುಂದುವರಿಕೆ.
- ಬೇಳೆಕಾಳು, ಖಾದ್ಯ ತೈಲ ಉತ್ಪಾದನೆಯಲ್ಲಿ **ಆತ್ಮನಿರ್ಭರತೆ.**
- ತರಕಾರಿ ಉತ್ಪಾದನೆ ಮತ್ತು ಶೇಖರಣೆಗಾಗಿ ಹೊಸ **ಕ್ಲಸ್ಟರ್**ಗಳ **ಪ್ರಾರಂಭ,** ಈ ಕ್ಲಸ್ಟರ್‌ಗಳಲ್ಲಿ **ಸಂಗ್ರಹಣೆ** ಮತ್ತು **ಸರಕು ಸಾಗಣೆ** ಸೌಲಭ್ಯ.
- **ಸಿರಿಧಾನ್ಯ**ವನ್ನು ಜಾಗತಿಕ **ಸೂಪರ್‌ಫುಡ್** ಆಗಿ ಪ್ರಚಾರ, ಸಿರಿಧಾನ್ಯವನ್ನು ಹೆಚ್ಚು ಬೆಳೆಯಲು ಸಣ್ಣ ರೈತರಿಗೆ ಪ್ರೋತ್ಸಾಹ. ಆಹಾರ ಮತ್ತು ಪೌಷ್ಟಿಕಾಂಶದ ಸುರಕ್ಷಿತ ಭಾರತಕ್ಕಾಗಿ ಪ್ರಕೃತಿ ಸ್ನೇಹಿ, ಹವಾಮಾನ–ನಿರೋಧಕ, ಲಾಭದಾಯಕ ಕೃಷಿಯನ್ನು ಉತ್ತೇಜಿಸಲು **ನೈಸರ್ಗಿಕ ಕೃಷಿಯ ರಾಷ್ಟ್ರೀಯ ಮಿಷನ್ ಪ್ರಾರಂಭ.**
- ಭಾರತವನ್ನು ವಿಶ್ವದ **ನ್ಯೂಟ್ರಿ–ಹಬ್** ಆಗಿಸಲು ಕ್ರಮ.
- ಸೂಕ್ತ ಬೆಂಬಲ ಬೆಲೆ, ತಂತ್ರದೊಂದಿಗೆ **ಬೆಳೆ ವೈವಿಧ್ಯೀಕರಣಕ್ಕೆ ಪ್ರೋತ್ಸಾಹ.** ನ್ನು ವಿಸ್ತರಿಸಲು ಬದ್ಧರಾಗಿದ್ದೇವೆ.
- ಕೃಷಿ–ಮೂಲಸೌಕರ್ಯ ಯೋಜನೆಗಳ ಸಮಗ್ರ ಅನುಷ್ಠಾನಕ್ಕಾಗಿ ನಾವು **ಕೃಷಿ ಮೂಲಸೌಕರ್ಯ ಮಿಷನ್** ಪ್ರಾರಂಭ. **ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ**ಯಡಿ ಸಮರ್ಥ ನೀರಿನ ನಿರ್ವಹಣೆಗಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಲು ನಾವು **ತಂತ್ರಜ್ಞಾನ ಶಕ್ತ ನೀರಾವರಿ ಉಪಕ್ರಮ.**
- ಶ್ರೇಣೀಕರಣ, ವಿಂಗಡಣೆ, ಸಂಸ್ಕರಣೆ ಮತ್ತು ಪ್ಯಾಕಿಂಗ್‌ನಂತಹ ಮೂಲ ಸೌಲಭ್ಯಗಳೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ವಲಯದಲ್ಲಿ **ಧಾನ್ಯ ಸಂಗ್ರಹಣಾ ಸೌಲಭ್ಯ.**
- ಬೆಳೆಗೆ ಕೀಟನಾಶಕ ಬಳಕೆ, ನೀರಾವರಿ, ಮಣ್ಣಿನ ಮಾಹಿತಿ, ಹವಾಮಾನ ಮುನ್ಸೂಚನೆ ಮುಂತಾದ ಕೃಷಿ ಸಂಬಂಧಿತ ಚಟುವಟಿಕೆಗಳಿಗಾಗಿ ದೇಶೀಯವಾಗಿ ಅಭಿವೃದ್ಧಿಪಡಿಸಿದ **ಭಾರತ್ ಕೃಷಿ ಉಪಗ್ರಹ ಉಡಾವಣೆ.**

- ರೈತ ಕೇಂದ್ರಿತ ಪರಿಹಾರಗಳು ಮತ್ತು ಸೇವೆಗಳನ್ನು ಒದಗಿಸಲು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದ ಅಭಿವೃದ್ಧಿ. ಈಗಿರುವ 25,000 **ಕಸ್ಟಮ್ ನೇಮಕಾತಿ ಕೇಂದ್ರಗಳ ಸಂಖ್ಯೆ ದ್ವಿಗುಣ**.
- ರೈತರಿಗೆ ಡಿಜಿಟಲ್ ಪರಿಹಾರಗಳನ್ನು ಒದಗಿಸಲು **ಕೃಷಿ ವಿಜ್ಞಾನ ಕೇಂದ್ರಗಳನ್ನು ನವೀಕರಣ.**
- ರೈತರಿಗೆ ಒಂದೇ ಸ್ಟಾಪ್ ಶಾಪ್‌ನಂತೆ ಎಲ್ಲಾ ಕೃಷಿ ಉತ್ಪನ್ನಗಳು ಮತ್ತು ಸೇವೆಗಳು ದೊರೆಯಲು **ಪಿಎಂ ಕಿಸಾನ್ ಸಮೃದ್ಧಿ ಕೇಂದ್ರ**ಗಳ ಸ್ಥಾಪನೆ.
- ಹೆಚ್ಚಿನ ಇಳುವರಿ ಕೊಡುವ, ಹವಾಮಾನವ ವೈಪರೀತ್ಯವನ್ನು ತಡೆದುಕೊಳ್ಳುವ ಮತ್ತು **ಜೈವಿಕ ಬಲವರ್ಧಿತ** ಬೀಜಗಳನ್ನು ಬಳಸಲು ರೈತರಿಗೆ ಪ್ರೋತ್ಸಾಹ.
- ಭಾರತೀಯ ಕೃಷಿ ಭೂಮಿಯಲ್ಲಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು **ನ್ಯಾನೋ–ಯೂರಿಯಾ**ವನ್ನು ಬಳಸಲು ಮತ್ತಷ್ಟು ಪ್ರೋತ್ಸಾಹ.
- ಮೇವು ಬ್ಯಾಂಕ್‌ಗಳು, ಹಾಲು ಪರೀಕ್ಷಾ ಪ್ರಯೋಗಾಲಯಗಳು, ಬೃಹತ್ ಹಾಲು ಕೂಲರ್‌ಗಳು ಮತ್ತು ಹಾಲು ಸಂಸ್ಕರಣಾ ಘಟಕಗಳ ಸೌಲಭ್ಯಗಳೊಂದಿಗೆ ಮುಂದಿನ ಐದು ವರ್ಷಗಳಲ್ಲಿ **ಹಳ್ಳಿಗಳಲ್ಲಿ ಡೇರಿ ಸಹಕಾರಿ ಜಾಲ**ದ ವಿಸ್ತರಣೆ.
- ಸ್ಥಳೀಯ ಜಾನುವಾರು ತಳಿಗಳನ್ನು ರಕ್ಷಿಸಲು ಪ್ರಯತ್ನ, ಅವುಗಳ ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು **ಆನುವಂಶಿಕ ವೈವಿಧ್ಯತೆಯನ್ನು ಸಂರಕ್ಷಿಸಲು ಪ್ರಯತ್ನ**.
- ಪ್ರಮುಖ ಜಾನುವಾರು ರೋಗಗಳ ನಿರ್ಮೂಲನೆ, ಬೃಹತ್ **ವ್ಯಾಕ್ಸಿನೇಷನ್ ಅಭಿಯಾನ**ದ ಮೂಲಕ **ಬ್ರೂಸೆಲೋಸಿಸ್ ರೋಗವನ್ನು ನಿಯಂತ್ರಣ**.
- ಸಹಕಾರಿ ಆಂದೋಲನವನ್ನು ತಳಮಟ್ಟದಿಂದ ಬಲಿಷ್ಠ, ದಕ್ಷ, ಪಾರದರ್ಶಕವಾಗಿಸುವ ಮತ್ತು ತಾಂತ್ರಿಕವಾಗಿ ಸದೃಢಗೊಳಿಸುವ ದೃಷ್ಟಿಯಿಂದ **ರಾಷ್ಟ್ರೀಯ ಸಹಕಾರಿ ನೀತಿ ಜಾರಿ**.





# ಮೀನುಗಾರರಿಗೆ ಮೋದಿ ಗ್ಯಾರಂಟಿ

- **ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ,** ಮೂಲಸೌಕರ್ಯಗಳ ಆಧುನೀಕರಣ, ಆರ್ಥಿಕ ಬೆಂಬಲ ಮತ್ತು ಕೌಶಲ್ಯ ಅಭಿವೃದ್ಧಿಯಂತಹ ಉಪಕ್ರಮಗಳ ಮೂಲಕ ಮೀನುಗಾರಿಕೆಗೆ ಪ್ರೋತ್ಸಾಹ.
- ತಾಂತ್ರಿಕತೆಯನ್ನು ಬಳಸಿಕೊಂಡು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಲಭ್ಯವಿರುವ **ವಿಮಾ ರಕ್ಷಣೆಗೆ** ಮತ್ತಷ್ಟು ಶಕ್ತಿ ಮತ್ತು ವಿಸ್ತರಣೆ.
- ಮೀನುಗಾರರಿಗೆ ಉತ್ಪಾದನೆ ಮತ್ತು **ಸಂಸ್ಕರಣಾ ಕ್ಲಸ್ಟರ್**ಗಳ ಅಭಿವೃದ್ಧಿ.
- ಮೀನುಗಾರರ ಆದಾಯ ಹೆಚ್ಚಿಸಲು ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ **ಕಡಲಕಳೆ ಕೃಷಿಗೆ ಉತ್ತೇಜನ.** ಕಡಲಾಳದ ಮುತ್ತು ಕೃಷಿಯನ್ನು ಉತ್ತೇಜನ, ಮೀನುಗಾರರಿಗೆ **ಸುಸ್ಥಿರ ಜೀವನೋಪಾಯದ ಅವಕಾಶಗಳ** ಸೃಷ್ಟಿ.
- **ನ್ಯೂಕ್ಲಿಯಸ್ ಸಂತಾನೋತ್ಪತ್ತಿ ಕೇಂದ್ರಗಳು** ಮತ್ತು **ಬ್ರೂಡ್ ಬ್ಯಾಂಕ್** ಸ್ಥಾಪನೆ.
- ಮೀನುಗಾರರ ಸುರಕ್ಷತೆ ಮತ್ತು ಭದ್ರತೆ ಎರಡನ್ನೂ ಖಾತ್ರಿಪಡಿಸುವ ಮೂಲಕ ಮೀನುಗಾರ ಸಮುದಾಯಕ್ಕೆ ಸಮಗ್ರ ಸೇವೆ ಒದಗಿಸಲು **ಉಪಗ್ರಹ ಚಿತ್ರಣವನ್ನು** ಬಳಸಿಕೊಂಡು **ವಿಶೇಷ ಕಾರ್ಯಕ್ರಮ.**
- ಜೈವಿಕ ಕೃಷಿ, ಜಲಚರಗಳಲ್ಲಿನ ರೋಗಗಳ ನಿರ್ವಹಣೆ, ಆಹಾರ ಮತ್ತು ಬೆಳವಣಿಗೆಯ ಮೇಲ್ವಿಚಾರಣೆಗಾಗಿ ತಂತ್ರಜ್ಞಾನ ಬಳಕೆ, ಮೀನುಗಾರಿಕೆ ಮತ್ತು ಜಲಚರ, **ಜಲಸಸ್ಯಗಳ ಸಂತಾನೋತ್ಪತ್ತಿಗಳ ಉದ್ಯಮದ ನಿರ್ವಹಣೆಗೆ ಡ್ರೋನ್ ತಂತ್ರಜ್ಞಾನ ಬಳಕೆ.**




# ಶ್ರಮಿಕ ಬಂಧುಗಳಿಗೆ ಮೋದಿ ಗ್ಯಾರಂಟಿ

- ರಾಷ್ಟ್ರೀಯ ವೇತನ ಮಟ್ಟದ ಆವರ್ತಕ ಪರಿಶೀಲನೆ, ಕಾಲಕಾಲಕ್ಕೆ **ರಾಷ್ಟ್ರೀಯ ಕನಿಷ್ಠ ವೇತನ ಮಿತಿಯ ಪರಿಶೀಲನೆಯ** ಬಗ್ಗೆ ಖಾತ್ರಿ.
- **ಅಂಚೆ ಕಚೇರಿಗಳು** ಮತ್ತು **ಡಿಜಿಟಲ್ ಇಂಡಿಯಾ** ಮೂಲಕ **ಸಾಮಾಜಿಕ ಭದ್ರತೆ.**
- **ಇ-ಶ್ರಮ್** ವ್ಯಾಪ್ತಿಯ ಕಾರ್ಮಿಕರಿಗೆ ವಿವಿಧ ಸರ್ಕಾರಿ ಕಾರ್ಯಕ್ರಮಗಳ ಪ್ರಯೋಜನಗಳನ್ನು ಪಡೆಯಲು ಸಹಾಯ.
- ಇ-ಶ್ರಮ್‌ನಲ್ಲಿ **ಗಿಗ್ ಉದ್ಯೋಗಿಗಳ ನೇಮಕಾತಿ,** ಗಿಗ್ ಉದ್ಯೋಗಿಗಳಿಗೆ ಅವರು ಅರ್ಹರಾಗಿರುವ ವಿವಿಧ ಕಾರ್ಯಕ್ರಮಗಳ ಪ್ರಯೋಜನ ಪಡೆಯಲು ಸಹಾಯ.
- ಬೀದಿ ಬದಿ ವ್ಯಾಪಾರಿಗಳಿಗೆ ಪ್ರಸ್ತುತವಿರುವ **ಪಿಎಂ ಸ್ವನಿಧಿ** ಯೋಜನೆಯ ಬಲವರ್ಧನೆ.
- ಪ್ರಮುಖ ಹಬ್ಬ ಹರಿದಿನಗಳಲ್ಲಿ ವಲಸೆ ಕಾರ್ಮಿಕರಿಗೆ ಅವರ ಮನೆಗಳಿಗೆ ತೆರಳಲು ಮತ್ತು ಅಲ್ಲಿಂದ ಮರಳಿ ಬರಲು ಸಹಾಯ ಮಾಡುವ ನಿಟ್ಟಿನಲ್ಲಿ **ವಿಶೇಷ ರೈಲು ಸೇವೆಗಳ** ಹೆಚ್ಚಳ.
- **ರಾಷ್ಟ್ರೀಯ ಹೆದ್ದಾರಿಗಳ** ಉದ್ದಕ್ಕೂ ಟ್ರಕ್ ಚಾಲಕರ ಅನುಕೂಲಕ್ಕಾಗಿ **ಆಧುನಿಕ ಅಗತ್ಯ ಸೌಲಭ್ಯಗಳುಳ್ಳ** ಕೇಂದ್ರಗಳು.
- ಆಟೊ, ಟ್ಯಾಕ್ಸಿ, ಟ್ರಕ್ ಸೇರಿದಂತೆ ಇತರೆ ಚಾಲಕರಿಗೆ **ಸಾಮಾಜಿಕ ಭದ್ರತಾ ಯೋಜನೆಗಳು,** ವಿಮೆ ಮತ್ತು ಇತರ ಕಲ್ಯಾಣ ಕಾರ್ಯಕ್ರಮದಡಿ **ಟ್ರಕ್ ಚಾಲಕರ ಶೇ. 100ರಷ್ಟು** ವ್ಯಾಪ್ತಿಯ **ಖಾತ್ರಿ.**



# ಎಂಎಸ್‌ಎಂಇ, ಸಣ್ಣ ವ್ಯಾಪಾರಿಗಳು ಮತ್ತು ವಿಶ್ವಕರ್ಮರಿಗೆ ಮೋದಿ ಗ್ಯಾರಂಟಿ

- ಸಣ್ಣ ವ್ಯಾಪಾರಿಗಳು ಮತ್ತು ಎಂಎಸ್‌ಎಂಇಗಳ ಬೆಳವಣಿಗೆಯನ್ನು ಬೆಂಬಲಿಸಲು ದೃಢವಾದ ಮತ್ತು ಸುಲಭವಾದ ಡಿಜಿಟಲ್ ಸಾಲ ಸೌಲಭ್ಯ ಒದಗಿಸಲು **ಡಿಜಿಟಲ್ ಇಂಡಿಯಾ** ಮೂಲಸೌಕರ್ಯದ ಬಳಕೆ.
- **ಪಿಎಂ ವಿಶ್ವಕರ್ಮ ಯೋಜನೆಗೆ** ಬಲವರ್ಧನೆ, ಆರ್ಥಿಕ ನೆರವು, ಸಾಲ ಸೌಲಭ್ಯಗಳು, ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ಮತ್ತು ಮಾರುಕಟ್ಟೆ ಪ್ರವೇಶದಂತಹ ಸರಣಿ ಉಪಕ್ರಮಗಳ ಮೂಲಕ ವಿಶ್ವಕರ್ಮ ಸಮುದಾಯದ ಬಲವರ್ಧನೆ.
- ಸಣ್ಣ ವ್ಯಾಪಾರಿಗಳು ಮತ್ತು ಎಂಎಸ್‌ಎಂಇಗಳಿಗೆ ಸೈಬರ್ ಬೆದರಿಕೆಗಳು ಮತ್ತು ವಂಚನೆಗಳ ವಿರುದ್ಧ ರಕ್ಷಣೆ ನೀಡಲು **ಸಾರ್ವಜನಿಕ ಸೈಬರ್ ಸುರಕ್ಷತೆ ಉತ್ಪನ್ನಗಳ ಸೂಟ್ ರಚನೆ.**
- ಅಗ್ನಿ, ಅವಘಡ, ಕಳ್ಳತನ, ನೈಸರ್ಗಿಕ ವಿಕೋಪದಂತಹ ಅಪಘಾತಗಳಿಂದ ರಕ್ಷಿಸಲು ಸಣ್ಣ ವ್ಯಾಪಾರಿಗಳು ಮತ್ತು ಎಂಎಸ್‌ಎಂಇಗಳಿಗೆ **ವಿಮಾ ಸೌಲಭ್ಯ**ಗಳ ಪ್ರಾರಂಭ.
- ಸಣ್ಣ ವ್ಯಾಪಾರಿಗಳು ಮತ್ತು ಎಂಎಸ್‌ಎಂಇಗಳಿಗೆ ವ್ಯವಹಾರಕ್ಕೆ ಉತ್ತಮ ವಾತಾವರಣ ಕಲ್ಪಿಸಲು ನಾವು **ಅಂಗೀಕಾರದ ನಿಯಮಗಳ ಸರಳೀಕರಣ.**
- ಒನ್‌ಡಿಸಿಯೊಂದಿಗೆ **ಸಣ್ಣ ವ್ಯಾಪಾರಿಗಳು** ಮತ್ತು **ಎಂಎಸ್‌ಎಂಇಗಳ ಸಬಲೀಕರಣ.**
- ಎಂಎಸ್‌ಎಂಇ ಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಹೆಚ್ಚಿನ ಅನುಕೂಲವಾಗುವ ನಿಟ್ಟಿನಲ್ಲಿ **ಜಿ.ಎಸ್.ಟಿ ಪೋರ್ಟಲ್** ಸರಳೀಕರಣ.
- ವಿನ್ಯಾಸ ಕೌಶಲ್ಯ ಸಂಸ್ಥೆಗಳ ಸಹಯೋಗದೊಂದಿಗೆ ನವನವೀನ ವಿನ್ಯಾಸಗಳನ್ನು ಆವಿಷ್ಕರಿಸುವ ಮೂಲಕ **ಸಾಂಪ್ರದಾಯಿಕ ಕರಕುಶಲತೆಯ ಆಧುನೀಕರಣ.**
- ಎಂಎಸ್‌ಎಂಇಗಳು, ಸಣ್ಣ ವ್ಯಾಪಾರಿಗಳು ಮತ್ತು ವಿಶ್ವಕರ್ಮ ಕುಟುಂಬಗಳಿಗೆ ರಫ್ತು ಸೌಲಭ್ಯವನ್ನು ಸುಲಭವಾಗಿ ಒದಗಿಸಲು **ಅಂಚೆ ಕಚೇರಿ ರಫ್ತು ಕೇಂದ್ರಗಳ ಜಾಲ** ವಿಸ್ತರಣೆ.
- ಸುಸ್ಥಿರ ಜೀವನಶೈಲಿಗಾಗಿ **ಖಾದಿಯನ್ನು ರಾಷ್ಟ್ರೀಯ ಮತ್ತು ಜಾಗತಿಕ ಬ್ರಾಂಡ್** ಆಗಿ ಪುನರುಜ್ಜೀವನ, ಈ ಉದ್ದೇಶವನ್ನು ಸಾಧಿಸಲು ರಚನಾತ್ಮಕ ಸುಧಾರಣೆ.
- ನವೀನ ಮತ್ತು ಉತ್ತಮ ಗುಣಮಟ್ಟದ ಆಟಿಕೆಗಳನ್ನು ಉತ್ಪಾದಿಸಲು ನುರಿತ ಉದ್ಯೋಗಿಗಳ ಮತ್ತು **ಶ್ರೀಮಂತ ಸಾಂಸ್ಕೃತಿಕ ಪರಂಪರೆಯ** ಬಳಕೆ.



# ಎಲ್ಲರೊಂದಿಗೆ, ಎಲ್ಲರ ವಿಕಾಸವೇ ಮೋದಿ ಗ್ಯಾರಂಟಿ

- ಬುಡಕಟ್ಟು ನಾಯಕ **ಭಗವಾನ್ ಬಿರ್ಸಾ ಮುಂಡಾ** ಅವರ 150 ನೇ ಜನ್ಮ ವಾರ್ಷಿಕೋತ್ಸವ ವರ್ಷ 2025 ಅನ್ನು ಭಗವಾನ್ ಬಿರ್ಸಾ ಮುಂಡಾ ಅವರ ಜಂಜಾಟಿಯ **ಗೌರವ ವರ್ಷ** ಎಂದು ಘೋಷಣೆ.
- ಬುಡಕಟ್ಟು ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಹೋಗಲಾಡಿಸಲು ಬುಡಕಟ್ಟು ಪ್ರದೇಶಗಳಲ್ಲಿ ಮಿಷನ್ ಮೋಡ್‌ನಲ್ಲಿ **ಸಮಗ್ರ ಆರೋಗ್ಯ ರಕ್ಷಣೆ ಮತ್ತು ಸೇವೆ.**
- ಶ್ರೀಮಂತ ಬುಡಕಟ್ಟು ಪರಂಪರೆ ಮತ್ತು ಸಂಸ್ಕೃತಿಯ ಸಂರಕ್ಷಣೆ, ಉತ್ತೇಜನ, ಬುಡಕಟ್ಟು ಸಾಂಪ್ರದಾಯಿಕ ಉಡುಗೆಗಳ ಮೇಲಿನ ಸಂಶೋಧನೆಯನ್ನು ಉತ್ತೇಜಿಸಲು, ಸಂರಕ್ಷಿಸಲು ಮತ್ತು ಪ್ರಸಾರ ಮಾಡಲು **ಬುಡಕಟ್ಟು ಸಂಶೋಧನಾ ಸಂಸ್ಥೆ**ಗಳಿಗೆ ಹೆಚ್ಚಿನ ಹಣ.
- **ಬುಡಕಟ್ಟು ಭಾಷೆಗಳ ಸಂರಕ್ಷಣೆ**ಗೆ ಸರಣಿ ಕಾರ್ಯಕ್ರಮಗಳ ಆಯೋಜನೆ.
- ಬುಡಕಟ್ಟು ಜನಾಂಗದ ಪಾರಂಪರಿಕ **ಔಷಧೀಯ ಚಿಕಿತ್ಸಾ ವಿಧಾನದ ಸಂರಕ್ಷಣೆ** ಮತ್ತು ಉತ್ತೇಜನ.
- ಸ್ವಾತಂತ್ರ್ಯ ಚಳವಳಿಗೆ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರು ನೀಡಿರುವ ಕೊಡುಗೆ ಮತ್ತು ಸಾಮಾಜಿಕ-ಸಾಂಸ್ಕೃತಿಕ ಪರಂಪರೆಯನ್ನು ಆಚರಿಸಲು **ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ವಸ್ತು ಸಂಗ್ರಹಾಲಯಗಳ ಸ್ಥಾಪನೆ.** ಬುಡಕಟ್ಟು ಕಲಾ ಪ್ರಕಾರಗಳನ್ನು ಉತ್ತೇಜಿಸಲು ಎಸ್.ಸಿ., ಎಸ್.ಟಿ ಸ್ಥಾಪನೆ.
- ಕಲ್ಯಾಣ ಯೋಜನೆಗಳು ಎಲ್ಲರಿಗೂ ತಲುಪುವುದನ್ನು ಖಚಿತಪಡಿಸಿಕೊಳ್ಳಲು **ಜಿಲ್ಲಾ ಮಟ್ಟದ ಸಮಿತಿ** ರಚನೆ, ಈ ಸಮಿತಿಯಲ್ಲಿ ಎಸ್ಸಿ, ಎಸ್ಟಿ ಮತ್ತು ಒಬಿಸಿಗಳಿಗೆ ಸಾಕಷ್ಟು ಪ್ರಾತಿನಿಧ್ಯ.
- **ಪಿಎಂ ಸೂರಜ್ ಪೋರ್ಟಲ್** ಮೂಲಕ ಜೀವನೋಪಾಯದ ಅವಕಾಶಗಳನ್ನು ಒದಗಿಸಲು ಅರ್ಹ ವ್ಯಕ್ತಿಗಳಿಗೆ ಸಾಲ ಸೌಲಭ್ಯ.
- ಸಣ್ಣ ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಹೆಚ್ಚಿಸಲು ಎಲ್ಲಾ ಅರ್ಹ ಬುಡಕಟ್ಟು ಸ್ವ-ಸಹಾಯ ಗುಂಪುಗಳನ್ನು **ವಂಧನ್ ವಿಕಾಸ ಕೇಂದ್ರ, ಎಫ್‌ಪಿಒಗಳು, ಎನ್‌ಆರ್‌ಎಲ್‌ಎಂಗಳೊಂದಿಗೆ ಸಂಯೋಜನೆ.** ಕೌಶಲ್ಯ ಮತ್ತು ಉದ್ಯಮಶೀಲತಾ ತರಬೇತಿ.

- **ಏಕಲವ್ಯ ಮಾದರಿ ವಸತಿ ಶಾಲೆಗಳ** ಸ್ಥಾಪನೆಗೆ ವೇಗ, ಶಾಲೆಗಳ ನಿರ್ಮಾಣ ಮತ್ತು ಕಾರ್ಯಾಚರಣೆ ತ್ವರಿತವಾಗಿಸಲು ಕ್ರಮ.
- ವಿಶೇಷವಾಗಿ ದುರ್ಬಲ ಬುಡಕಟ್ಟು ಗುಂಪಿನ (ಪಿವಿಟಿಜಿ)ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಒಟ್ಟಾರೆ ಜನಸಂಖ್ಯೆಯ ಮಟ್ಟಕ್ಕೆ ತರಲು ನಾವು **ಪಿಎಂ ಜನ್ಮನ್ ಯೋಜನೆ** ಮೂಲಕ ರೂ 24,000 ಕೋಟಿ ಹೂಡಿಕೆ.
- **ಎಸ್.ಸಿ., ಎಸ್.ಟಿ ಮತ್ತು ಒಬಿಸಿ ಸಮುದಾಯಗಳ ಸಾಂಪ್ರದಾಯಿಕ ತಾಣಗಳ ಅಭಿವೃದ್ಧಿಗೆ ನೆರವು:** ಎಸ್ ಸಿ, ಎಸ್ಟಿ ಮತ್ತು ಒಬಿಸಿ ಸಮುದಾಯಗಳ ಸಾಂಪ್ರದಾಯಿಕ ತಾಣಗಳ ಅಭಿವೃದ್ಧಿಗೆ ಮೀಸಲಾದ ಸಹಾಯ.
- **ಮುದ್ರಾ ಸಾಲದ ಮಿತಿಯನ್ನು ರೂ 20 ಲಕ್ಷಕ್ಕೆ ದ್ವಿಗುಣ**ಗೊಳಿಸುವ ಮೂಲಕ ನಾವು ಎಸ್.ಸಿ, ಎಸ್.ಟಿ., ಹಾಗೂ ಒಬಿಸಿ ಸೇರಿದಂತೆ ಎಲ್ಲಾ ಕುಟುಂಬಗಳಿಗೆ ಜೀವನೋಪಾಯದ ಅವಕಾಶಗಳ ವಿಸ್ತರಣೆ.
- ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಜಾರಿಯಲ್ಲಿರುವ **ವಿದ್ಯಾರ್ಥಿವೇತನ** ವಿಸ್ತರಣೆ. ಉನ್ನತ ಶಿಕ್ಷಣದಿಂದ ವಂಚಿತರಾಗದಂತೆ ಖಾತ್ರಿ.
- **ವಿಶ್ವಕರ್ಮ ಜನರ ಪೂರ್ವ ಕೌಶಲ್ಯ**ಗಳನ್ನು ಗುರುತಿಸಲು ಮತ್ತು ಪ್ರಮಾಣೀಕರಿಸಲು ಕಾರ್ಯಕ್ರಮ ಪ್ರಾರಂಭ.
- **ಅಲೆಮಾರಿ ಬುಡಕಟ್ಟು ಜನಾಂಗಗಳ ಸಬಲೀಕರಣ**ಕ್ಕಾಗಿ ರೂಪಿಸಿರುವ ಯೋಜನೆಗಳ ವಿಸ್ತರಣೆ.
- ಸಫಾಯಿ ಕರ್ಮಚಾರಿಗಳಿಗಾಗಿ ರೂಪಿಸಿರುವ **'ನಮಸ್ತೆ ಯೋಜನೆ'**ಯ ಉಪಕ್ರಮಗಳ ವಿಸ್ತರಣೆ.
- ದಿವ್ಯಾಂಗರಿಗೆ ಕೈಗೆಟುಕುವ ಬೆಲೆಯಲ್ಲಿ ದೇಶೀಯವಾಗಿ ಸಹಾಯಕ ಸಾಧನಗಳ ಅಭಿವೃದ್ಧಿ, ದಿವ್ಯಾಂಗರಿಗೆ ಕೈಗೆಟುಕುವ ದರದಲ್ಲಿ ವಸತಿ ಸೌಲಭ್ಯ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ವಿಶೇಷ ಸಾಮರ್ಥ್ಯವುಳ್ಳ ವ್ಯಕ್ತಿಗಳ ವಸತಿ ಅಗತ್ಯಗಳಿಗೆ ಆದ್ಯತೆ, **ಕೈಗೆಟುಕುವ ದರದಲ್ಲಿ ವಸತಿ ಸೌಲಭ್ಯದ ಖಾತ್ರಿ.**
- ತೃತೀಯ ಲಿಂಗಿಗಳಿಗೆ **ಗರೀಮಾ ಗೃಹ ನೆಟ್ವರ್ಕ್** ವಿಸ್ತರಣೆ, ಅರ್ಹ **ತೃತೀಯ ಲಿಂಗಿ ವ್ಯಕ್ತಿಗಳು ಆಯುಷ್ಮಾನ್ ಭಾರತ್** ಯೋಜನೆ ವ್ಯಾಪ್ತಿಗೆ.
- ಭಾಷಾ ಅಲ್ಪಸಂಖ್ಯಾತರಿಗೆ ತಂತ್ರಜ್ಞಾನದ ವ್ಯವಸ್ಥೆ ಭಾಷಾ ಅಲ್ಪಸಂಖ್ಯಾತರ ಭಾಷೆಗಳ ಸಂರಕ್ಷಣೆ/ಅನುವಾದಕ್ಕೆ ಅನುಕೂಲವಾಗುವಂತೆ **ಭಾಷಿಣಿ**ಯಂತಹ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯ ರಚನೆ.






# ವಿಶ್ವಬಂಧು ಭಾರತಕ್ಕಾಗಿ ಮೋದಿ ಗ್ಯಾರಂಟಿ

- ಸಮ್ಮಾನ, ಸಂವಾದ, ಸಹಯೋಗ, ಶಾಂತಿ ಮತ್ತು ಸಮೃದ್ಧಿಯನ್ನು ಸಾರುವ ಪ್ರಧಾನಿ ಮೋದಿಯವರ **5ಎಸ್ ಸೂತ್ರ** ಪಾಲನೆಯ ಮೂಲಕ ಜಾಗತಿಕ ದಕ್ಷಿಣದ ಧ್ವನಿಯಾಗಿ **ಭಾರತದ ಸ್ಥಾನವನ್ನು ಮತ್ತಷ್ಟು ಬಲವರ್ಧಿಸುವ ಸಂಕಲ್ಪ.**
- ಅಗತ್ಯ ಸಂದರ್ಭಗಳಲ್ಲಿ ಎಲ್ಲರಿಗಿಂತ ಮೊದಲು ಮಾನವೀಯತೆಯ ನೆರವು ನೀಡುವ ಹಾಗೂ ವಿಪತ್ತಿನ ಸಂದರ್ಭದಲ್ಲಿ ಪರಿಹಾರಗಳ ಮೂಲಕ **ಸಹಾಯ ಹಸ್ತ ಚಾಚುವ ಭಾರತವು ಮೊದಲ ಮಿತ್ರ** ಎಂಬ ಭಾವನೆಯ ಗೌರವವನ್ನು ಮತ್ತಷ್ಟು ಪ್ರಚುರಪಡಿಸುವ ಕಾರ್ಯ.
- **ವಿಶ್ವಸಂಸ್ಥೆಯ ಭದ್ರತಾ ಸಭೆಯಲ್ಲಿ ಖಾಯಂ ಸದಸ್ಯತ್ವ** ಸ್ಥಾನ ಕಲ್ಪಿಸಲು ಬದ್ಧ.
- ಅಂತಾರಾಷ್ಟ್ರೀಯ ಭಯೋತ್ಪಾದನೆಯ ವಿರುದ್ಧದ ಸಮಗ್ರ ಸಮಾವೇಶ ಆಯೋಜನೆ, **'ಭಯೋತ್ಪಾದನೆಗೆ ಹಣವಿಲ್ಲ'** ಎಂಬ ಸಮ್ಮೇಳನಗಳ ಮೂಲಕ ಭಯೋತ್ಪಾದನೆಗೆ ಹಣಕಾಸು ನೆರವು ನಿಗ್ರಹಕ್ಕೆ ದೇಶದ ದೇಶಗಳ ನಡುವೆ ಸಮನ್ವಯ.
- ಉಪಖಂಡದಲ್ಲಿ ಸಮೃದ್ಧಿ, ಸಂಪತ್ತು ಮತ್ತು ಸುರಕ್ಷತೆ ಹೆಚ್ಚಿಸಲು **ನೆರೆಯ ದೇಶಗಳಿಗೆ ಮೊದಲ ಆದ್ಯತೆ,** ಪ್ರಾದೇಶಿಕ ಸಹಕಾರ, ವ್ಯವಹಾರಗಳ ವೃದ್ಧಿ.
- **ಕಡಲ ಸುರಕ್ಷತೆಯ ಬಲವರ್ಧನೆ** (ಸಾಗರ್), ಹಿಂದೂ ಮಹಾಸಾಗರದ ಪ್ರದೇಶ/ಇಂಡೋ–ಪೆಸಿಫಿಕ್‌ನ ದೇಶಗಳೊಂದಿಗೆ ಎಲ್ಲರ ಸುರಕ್ಷತೆ ಮತ್ತು ಬೆಳವಣಿಗೆಗಾಗಿ ಸಹಯೋಗ.
- ಭಾರತದ ವ್ಯಾಪಾರ ಹಿತಾಸಕ್ತಿಗಳ ಉತ್ತೇಜನಕ್ಕೆ **ಐಎಂಇಸಿ ಸ್ಥಾಪನೆ,** ಖನಿಜಗಳ ಭದ್ರತೆಗಾಗಿ ಕಾರ್ಯತಂತ್ರಗಳ ಸಹಭಾಗಿತ್ವ.
- ಜಾಗತಿಕ ಮಟ್ಟದಲ್ಲಿ ಭಾರತ ತನ್ನ ಶಕ್ತಿ–ಸಾಮರ್ಥ್ಯಗಳಿಂದ ಪ್ರಬಲ ದೇಶವಾಗಿ ಹೊರಹೊಮ್ಮುತ್ತಿರುವುದಕ್ಕೆ ಅನುಗುಣವಾಗಿ ನಮ್ಮ **ರಾಜತಾಂತ್ರಿಕರ ಜಾಲ ಮತ್ತಷ್ಟು ವಿಸ್ತರಣೆ.**
- **ಅನಿವಾಸಿ ಭಾರತೀಯರ ಜತೆಗಿನ ಸಂಪರ್ಕ ವೃದ್ಧಿ** ಹಾಗೂ ದೇಶದ ಬೆಳವಣಿಗೆಗೆ ಅವರ ಸಹಕಾರ ಮತ್ತು ಅಭಿವೃದ್ಧಿಯಲ್ಲಿ ಪಾಲ್ಗೊಳ್ಳುವಿಕೆಯ ಹೆಚ್ಚಳ.

- ಭಾರತದ ಶ್ರೀಮಂತ ಸಂಸ್ಕೃತಿಯನ್ನು ಪ್ರದರ್ಶಿಸಲು ಮತ್ತು ಯೋಗ, ಆಯುರ್ವೇದ, ಭಾರತೀಯ ಭಾಷೆಗಳು, ಶಾಸ್ತ್ರೀಯ ಸಂಗೀತ, ಸಿನೆಮಾ ಆಧ್ಯಾತ್ಮಿಕತೆಯಲ್ಲಿ ತರಬೇತಿ ನೀಡಲು ನಾವು ವಿಶ್ವದಾದ್ಯಂತ **ಸ್ವಾಮಿ ತಿರುವಳ್ಳುವರ್ ಸಾಂಸ್ಕೃತಿಕ ಕೇಂದ್ರ**ಗಳ ಸ್ಥಾಪನೆ.
- ಅಂತರಾಷ್ಟ್ರೀಯ ಸೌರ ಒಕ್ಕೂಟ, ವಿಪತ್ತು ನಿರೋಧಕ ಮೂಲಸೌಕರ್ಯಕ್ಕಾಗಿ ಒಕ್ಕೂಟ, **ಒನ್ ಫ್ಯೂಚರ್ ಅಲೈಯನ್ಸ್, ಜಾಗತಿಕ ಜೈವಿಕ ಇಂಧನ ಅಲೈಯನ್ಸ್** ಮತ್ತು **ಬಿಗ್ ಕ್ಯಾಟ್ ಅಲೈಯನ್ಸ್**ನಂತಹ ಪರಸ್ಪರ ಆಸಕ್ತಿಯ ಕ್ಷೇತ್ರಗಳಲ್ಲಿ ಸಮಾನ ಮನಸ್ಕ ಪಾಲುದಾರರ ಮೈತ್ರಿ ರಚನೆ.
- ಸಾರ್ವಜನಿಕ ಸೇವೆಗಳನ್ನು ಸಮಾಜಕ್ಕೆ ತಲುಪಿಸಲು ಭಾರತ ಅಳವಡಿಸಿಕೊಂಡಿರುವ **ಕ್ರಾಂತಿಕಾರಿ ಡಿಜಿಟಲ್ ತಂತ್ರಜ್ಞಾನ**ವನ್ನು ಪಾಲುದಾರ ರಾಷ್ಟ್ರಗಳೊಂದಿಗೆ ಹಂಚಿಕೊಳ್ಳುವ ನಿಟ್ಟಿನಲ್ಲಿ ಕ್ರಮ.
- ಪ್ರಮಾಣೀಕೃತ ಕೋರ್ಸ್‌ಗಳನ್ನು ಒದಗಿಸಲು ಎಲ್ಲಾ ಪ್ರಮುಖ ದೇಶಗಳಲ್ಲಿ **ಯೋಗ** ಮತ್ತು **ಆಯುರ್ವೇದ ಸಂಸ್ಥೆಗಳ ಸ್ಥಾಪನೆ.**
- ಭಾರತದಿಂದ ಅಕ್ರಮ ಮಾರ್ಗದಲ್ಲಿ ತೆಗೆದುಕೊಂಡು ಹೋಗಿರುವ **ಭಾರತೀಯ ವಿಗ್ರಹಗಳು ಮತ್ತು ಕಲಾಕೃತಿಗಳನ್ನು** ಮರಳಿ **ತರಲು ಅವಿರತವಾಗಿ ಶ್ರಮ.**
- ವಿಶ್ವಾದ್ಯಂತ ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ **ಶಾಸ್ತ್ರೀಯ ಭಾರತೀಯ ಭಾಷೆಗಳ ಅಧ್ಯಯನಕ್ಕೆ ಪ್ರೋತ್ಸಾಹ.**
- **ಭಾರತೀಯ ನಾಗರಿಕತೆ ಉಗಮಗೊಂಡ ಕೇಂದ್ರ ಸ್ಥಾನಗಳನ್ನು ಪುನರುಜ್ಜೀವನಗೊಳಿಸಲು** ವಿವಿಧ ದೇಶಗಳ ಸಹಯೋಗ.
- ರಾಮಾಯಣವನ್ನು ಪ್ರಪಂಚದಾದ್ಯಂತ, ವಿಶೇಷವಾಗಿ ದಕ್ಷಿಣ ಮತ್ತು ಆಗ್ನೇಯ ಏಷ್ಯಾದಲ್ಲಿ ಆಚರಣೆ. **ರಾಮ್ ಲಲ್ಲಾ ಪ್ರಾಣ ಪ್ರತಿಷ್ಠಾಪನಾ ನೆನಪಿಗಾಗಿ ವಿಶ್ವದಾದ್ಯಂತ ರಾಮಾಯಣ ಉತ್ಸವ ಆಚರಣೆ.**





# ಸುರಕ್ಷಿತ ಭಾರತಕ್ಕಾಗಿ ಮೋದಿ ಗ್ಯಾರಂಟಿ

- ಭಯೋತ್ಪಾದನೆಯ ಎಲ್ಲಾ ರೀತಿಯ ಬೆದರಿಕೆಗಳಿಂದ ದೇಶ ಮತ್ತು ವಿದೇಶಗಳಲ್ಲಿರುವ **ಭಾರತದ ನಾಗರಿಕರು ಮತ್ತು ಅವರ ಹಿತಾಸಕ್ತಿಗಳನ್ನು ರಕ್ಷಿಸಲು ಬದ್ಧ.**
- ಮಿಲಿಟರಿಯಲ್ಲಿ ಉತ್ತಮ ಸಮನ್ವಯಕ್ಕಾಗಿ **ರಕ್ಷಣಾ ಸಿಬ್ಬಂದಿ ಮುಖ್ಯಸ್ಥರ (ಸಿಡಿಎಸ್) ಸ್ಥಾನವನ್ನು** ಸ್ಥಾಪನೆ, ಹೆಚ್ಚು ಪರಿಣಾಮಕಾರಿ ಕಾರ್ಯಾಚರಣೆಗಳಿಗಾಗಿ ಮತ್ತಷ್ಟು **ಮಿಲಿಟರಿ ಥಿಯೇಟರ್ ಕಮಾಂಡ್‌ಗಳ ಸ್ಥಾಪನೆ.**
- ಗಡಿ ಪ್ರದೇಶಗಳಲ್ಲಿ ಮೂಲಸೌಕರ್ಯದಲ್ಲಿ ಸುಧಾರಣೆ, ಭಾರತ-ಚೀನಾ, ಇಂಡೋ-ಪಾಕಿಸ್ತಾನ ಮತ್ತು ಇಂಡೋ-ಮ್ಯಾನ್ಮಾರ್ **ಗಡಿಗಳಲ್ಲಿ ಬೇಲಿ ನಿರ್ಮಾಣದಲ್ಲಿ** ಸುಧಾರಣೆ ತರಲು ಬೇಲಿಯನ್ನು ಮತ್ತಷ್ಟು ಬಲಪಡಿಸಲು **ತಾಂತ್ರಿಕವಾಗಿ ಸುಧಾರಣೆ.**
- ಮಾದಕವಸ್ತು ಕಳ್ಳಸಾಗಣೆ ಜಾಲಗಳನ್ನು ಪರಿಣಾಮಕಾರಿಯಾಗಿ ಪತ್ತೆಹಚ್ಚಲು **ಬಿಗ್ ಡೇಟಾ ಅನಾಲಿಟಿಕ್ಸ್, ಕೃತಕ ಬುದ್ಧಿಮತ್ತೆ(AI), ಡ್ರೋನ್‌ಗಳ ಮತ್ತು ಉಪಗ್ರಹ ಚಿತ್ರಣ ಬಳಕೆ.**
- ನಾಗರಿಕರಿಗೆ ಭದ್ರತೆ ಮತ್ತು ನ್ಯಾಯ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಜಾರಿಗೆ ತಂದಿರುವ **ಭಾರತೀಯ ನ್ಯಾಯ ಸಂಹಿತೆಯ** ಮೂಲಕ **ಆನ್ ಲೈನ್ ಪ್ರಮಾಣಪತ್ರ ಕೋರ್ಸ್, ವಿಶ್ವವಿದ್ಯಾಲಯಗಳು** ಮತ್ತು **ಕಾನೂನು ಶಾಲೆಗಳಲ್ಲಿ ಹೊಸ ಪಠ್ಯಕ್ರಮ** ಮುಂತಾದ ಹೆಚ್ಚುವರಿ ಉಪಕ್ರಮಗಳ ಮೂಲಕ ಅದರ ಪರಿಣಾಮಕಾರಿ ಅನುಷ್ಠಾನಕ್ಕೆ ಬದ್ಧ.
- **ಭಾರತೀಯ ಸಶಸ್ತ್ರ ಪಡೆಗಳು** ಮತ್ತು **ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳನ್ನು** ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಉಪಕರಣಗಳು ಮತ್ತು **ತಂತ್ರಜ್ಞಾನದೊಂದಿಗೆ ಮತ್ತಷ್ಟು ಸಜ್ಜು.**

- ಎಡಪಂಥೀಯ ಉಗ್ರವಾದದ ಉಪಟಳ ಕೊನೆಗಾಣಿಸುವುದಕ್ಕೆ ಸಂಕಲ್ಪ, ಎಡಪಂಥೀಯ **ಉಗ್ರವಾದದಿಂದ ಪೀಡಿತವಾಗಿರುವ** ಪ್ರದೇಶಗಳಲ್ಲಿ ವಾಸಿಸುವ **ಜನರಿಗೆ ಅಭಿವೃದ್ಧಿ ಮತ್ತು ಕಲ್ಯಾಣ ಯೋಜನೆಗಳು** ತಲುಪಿಸುವ ಖಾತ್ರಿ.
- **ಸಿಎಎ ಫಲಾನುಭವಿಗಳಿಗೆ ಪುನರ್ವಸತಿ** ಮತ್ತು ಅವರ **ಜೀವನೋಪಾಯಕ್ಕೆ ಬೆಂಬಲ.**
- ಶಿಕ್ಷೆಯಿಂದ ನ್ಯಾಯದ ಕಡೆಗೆ ಹೋಗಲು ಮತ್ತು ದೇಶದಲ್ಲಿ ಪ್ರಸ್ತುತ ಶಿಕ್ಷೆಯ ಪ್ರಮಾಣವನ್ನು ಸುಧಾರಿಸಲು, ವಿಧಿವಿಜ್ಞಾನ ಮೂಲಸೌಕರ್ಯವನ್ನು ಬಲಪಡಿಸಲು ನಾವು **ರಾಷ್ಟ್ರೀಯ ವಿಧಿವಿಜ್ಞಾನ ಮಿಷನ್** ಪ್ರಾರಂಭ.
- ಹಿಂದೂ ಮಹಾಸಾಗರದ ಆಯಕಟ್ಟಿನ ಸ್ಥಳಗಳಲ್ಲಿ **ಭಾರತದ ರಕ್ಷಣಾ ಹೆಜ್ಜೆಗುರುತಿನ ವಿಸ್ತರಣೆ,** ದೇಶದ ಭದ್ರತಾ ಹಿತಾಸಕ್ತಿಗಳನ್ನು ಕಾಪಾಡಲು **ಸ್ನೇಹಪರ ದೇಶಗಳೊಂದಿಗೆ ಪಾಲುದಾರಿಕೆ.**
- ದೇಶದ ಡಿಜಿಟಲ್ ಸಾರ್ವಭೌಮತ್ವವನ್ನು ಬಲಪಡಿಸಲು ಪರಿಣಾಮಕಾರಿ ಕ್ರಮ, **ಇಂಟರ್ನೆಟ್‌ನಲ್ಲಿ ಭಾರತೀಯರ ಸುರಕ್ಷತೆಗೆ ಬೆದರಿಕೆ ಒಡ್ಡುವ ಡಿಜಿಟಲ್ ಘಟಕಗಳ ವಿರುದ್ಧ ಕಠಿಣ ಕ್ರಮ.**
- ದೇಶದ ಸೈಬರ್ ಸಂರಕ್ಷಣಾ ಏಜೆನ್ಸಿಗಳು ಮತ್ತು ಮೂಲಸೌಕರ್ಯಗಳನ್ನು ಉತ್ತಮಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡಲು **ಸೈಬರ್ ಭದ್ರತಾ ಪ್ರಾಧಿಕಾರ ಸ್ಥಾಪನೆ.**






# ಸಮೃದ್ಧ ಭಾರತವೇ ಮೋದಿಯ ಗ್ಯಾರಂಟಿ

- ಮುಂದಿನ 5 ವರ್ಷಗಳಲ್ಲಿ ಭಾರತವು **3ನೇ ಅತಿ ದೊಡ್ಡ ಆರ್ಥಿಕ ಶಕ್ತಿ**ಯಾಗಿಸುವ ಭರವಸೆ.
- ಕಡಿಮೆ ಹಣದುಬ್ಬರ, **ಹಣಕಾಸಿನ ಉನ್ನತ ಬೆಳವಣಿಗೆ**ಯಂಥ ವಿವೇಚನಾಯುತ ಹಾದಿ, ಆರ್ಥಿಕ ಹಿತಾಸಕ್ತಿಗಳು ಮತ್ತು ರಾಷ್ಟ್ರೀಯ ಭದ್ರತೆಯನ್ನು **ಅಂತರರಾಷ್ಟ್ರೀಯ ಪ್ರಕ್ಷುಬ್ಧತೆಯಿಂದ ರಕ್ಷಣೆ.**
- **ಜಾಗತಿಕ ಸವಾಲು**ಗಳು ಮತ್ತು **ಕೋವಿಡ್ ಸಾಂಕ್ರಾಮಿಕ**ದಂತಹ ಘಟನೆಗಳ ಹೊರತಾಗಿಯೂ ಜೀವನೋಪಾಯದ ನಿರೀಕ್ಷೆಗಳಿಗೆ ಬದ್ಧ, ನಾಗರಿಕರಿಗೆ ಉದ್ಯೋಗ, ಸ್ವಯಂ **ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳನ್ನು ಹೆಚ್ಚಿಸಲು ಬದ್ಧ.**
- ಅಂತಾರಾಷ್ಟ್ರೀಯ ಸಹಕಾರ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಕಾನೂನುಗಳ ಸರಳೀಕರಣದ ಮೂಲಕ ನಾವು **ಭಾರತದ ರಫ್ತನ್ನು ಹೆಚ್ಚಿಸಲು ಉತ್ತೇಜನ.**
- **ಮೇಕ್ ಇನ್ ಇಂಡಿಯಾ, ಪಿಎಲ್ಐ ಮತ್ತು ಸರಳೀಕರಣ** ನೀತಿಗಳು ಉತ್ಪಾದನಾ ಚಟುವಟಿಕೆಗಳ ಗಮನಾರ್ಹ ಹೆಚ್ಚಳದ ಮೂಲಕ ಭಾರತವನ್ನು **ಜಾಗತಿಕ ಉತ್ಪಾದನಾ ಶಕ್ತಿ ಕೇಂದ್ರವನ್ನಾಗಿ ಮಾಡುವ ಸಂಕಲ್ಪ.**
- ನಮ್ಮ ಆರ್ಥಿಕ ಅಗತ್ಯಗಳಿಗೆ ಅನುಗುಣವಾಗಿ **ಆರ್ಥಿಕ ಮತ್ತು ವಾಣಿಜ್ಯ ಶಾಸನ**ಗಳನ್ನು ಸಂಪೂರ್ಣವಾಗಿ **ಪುನರುಜ್ಜೀವನ**ಗೊಳಿಸುವ ಅಭ್ಯಾಸವನ್ನು ಪ್ರಾರಂಭಿಸಲು ಬದ್ಧ.
- ನಮ್ಮ ಆರ್ಥಿಕತೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ **ಪ್ರಾಮಾಣಿಕ ತೆರಿಗೆದಾರರಿಗೆ ಗೌರವ.**



# ಜಾಗತಿಕ ಉತ್ಪಾದನಾ ಕೇಂದ್ರಕ್ಕೆ ಮೋದಿ ಗ್ಯಾರಂಟಿ

- **ಮೇಕ್ ಇನ್ ಇಂಡಿಯಾ** ಕಾರ್ಯಕ್ರಮದಡಿ ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವಾಗಿಸಲು ಮತ್ತು ಈ ನಿರ್ಣಾಯಕ ವಲಯದಲ್ಲಿ **ಉದ್ಯೋಗವನ್ನು ದ್ವಿಗುಣಗೊಳಿಸುವ** ನಿಟ್ಟಿನಲ್ಲಿ ಕಾರ್ಯ.
- ಉತ್ಪಾದನೆಯೊಂದಿಗೆ ವಿನ್ಯಾಸ ಸೇವೆಗಳಲ್ಲಿ ನಮ್ಮ ಶಕ್ತಿಯನ್ನು ಒಗ್ಗೂಡಿಸುವ ಮೂಲಕ ಪ್ರಮುಖ **ಉತ್ಪನ್ನ ರಾಷ್ಟ್ರವಾಗುವ ಶಕ್ತಿ ನಿರ್ಮಾಣ.**
- **ಪಿಎಂ –ಗತಿಶಕ್ತಿಯ** ತತ್ವಗಳ ಆಧಾರದಡಿ ಸರ್ಕಾರವು ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಗಾಗಿ ವಿವಿಧ ಕೈಗಾರಿಕಾ ಕಾರಿಡಾರ್‌ಗಳಲ್ಲಿ ಕೈಗಾರಿಕಾ ನಗರಗಳನ್ನು ಅಭಿವೃದ್ಧಿಯೊಂದಿಗೆ, **ದೇಶದ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೀಕರಣಕ್ಕೆ ಉತ್ತೇಜನ.**
- ದೇಶದ ಎಲ್ಲಾ **ಜಿಲ್ಲೆಗಳಲ್ಲಿ ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಯನ್ನು** ಉತ್ತೇಜಿಸಲು **ಉಪಕ್ರಮವೊಂದರ** ಪ್ರಾರಂಭ. ಇದರಡಿ ಒಂದು ಜಿಲ್ಲೆ ಒಂದು ಉತ್ಪನ್ನ (ODOP) **ಬ್ರ್ಯಾಂಡ್, ಪ್ರಚಾರ ಮತ್ತು ರಫ್ತುಗಳಿಗೆ ಪ್ರೋತ್ಸಾಹ.**
- ಆಹಾರ ಪೂರೈಕೆ ಸರಪಳಿಯ ಸಮಗ್ರ ಮೇಲ್ವಿಚಾರಣೆಯನ್ನು ಸಕ್ರಿಯಗೊಳಿಸಲು ಅತ್ಯಾಧುನಿಕ ತಂತ್ರಜ್ಞಾನಗಳೊಂದಿಗೆ **ಸುಸಜ್ಜಿತವಾದ ಸ್ಮಾರ್ಟ್ ಆಹಾರ ಸಂಸ್ಕರಣಾ ಕೇಂದ್ರ**ಗಳ ಸ್ಥಾಪನೆ.
- ಸಂಸ್ಕರಿಸಿದ ಹಣ್ಣುಗಳು, ತರಕಾರಿಗಳು, ಮೀನು, ಸಮುದ್ರಾಹಾರ ಮತ್ತು ಡೇರಿ ಉತ್ಪನ್ನಗಳ ತಯಾರಿಸುವ ದೇಶಗಳ ಪಂಕ್ತಿಯಲ್ಲಿ ಭಾರತವನ್ನು ಪ್ರಮುಖ **ಮೌಲ್ಯಯುತ ಉತ್ಪಾದಕ ದೇಶವನ್ನಾಗಿ** ಮಾಡುವ ಸಂಕಲ್ಪ.

- ಉಕ್ಕು, ಸಿಮೆಂಟ್, ಲೋಹಗಳು ಮತ್ತು ಇಂಜಿನಿಯರಿಂಗ್ ಸರಕು ಕೈಗಾರಿಕೆಗಳಲ್ಲಿ **ತಂತ್ರಜ್ಞಾನ** ಮತ್ತು **ಸುಸ್ಥಿರತೆಯ ಪರಿವರ್ತನೆಯ** ಮೇಲೆ ಗಮನ ಕೇಂದ್ರೀಕರಣ.
- ದೇಶೀಯ ರಕ್ಷಣಾ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಿಸಲು ಕ್ರಮ. **ಮೇಡ್ ಇನ್ ಭಾರತ್ ರಕ್ಷಣಾ ಸಾಧನಗಳ ರಫ್ತು ಪ್ರಮಾಣ ದ್ವಿಗುಣ.**
- ಭಾರತವನ್ನು ಜಾಗತಿಕ ರೈಲ್ವೇ ಉತ್ಪಾದನಾ ಕೇಂದ್ರವನ್ನಾಗಿ ರೂಪಿಸಲು **ರೈಲ್ವೆ ವಲಯದಲ್ಲಿ ಉತ್ಪಾದನೆ, ಸಂಶೋಧನೆ** ಮತ್ತು **ಅಭಿವೃದ್ಧಿಗೆ ಉತ್ತೇಜನ.**
- ಭಾರತದಲ್ಲಿ ವಾಣಿಜ್ಯ ವಿಮಾನ ತಯಾರಿಕೆಗೆ ಅಗತ್ಯವಿರುವ ಪೂರಕ ವಾತಾವರಣ ಕಲ್ಪಿಸಲು ಕ್ರಮ. ದೇಶೀಯ ನಿರ್ಮಿತ ಪ್ರಯಾಣಿಕ ವಿಮಾನವನ್ನು ಅಭಿವೃದ್ಧಿಪಡಿಸಲು ಪ್ರಯತ್ನ.
- **ಮೇಕ್ ಇನ್ ಇಂಡಿಯಾ** ಉಪಕ್ರಮದಡಿ ದುರಸ್ತಿ ಮತ್ತು ಕೂಲಂಕಷ (MRO) ಚಟುವಟಿಕೆಗಳು ಹಾಗೂ **ವಿಮಾನ ಹಣಕಾಸು ಮತ್ತು ಗುತ್ತಿಗೆ ಚಟುವಟಿಕೆಗಳ** ಸಂಸ್ಥೆಗಳನ್ನು ಉತ್ತೇಜಿಸುವ ಮೂಲಕ **ನಾಗರಿಕ ವಿಮಾನಯಾನ ಪರಿಸರ ವ್ಯವಸ್ಥೆಯ ಬಲವರ್ಧನೆ.**
- ಮೇಕ್ ಇನ್ ಇಂಡಿಯಾ ಉಪಕ್ರಮದಡಿ **ಹಡಗು ನಿರ್ಮಾಣಕ್ಕೆ ಉತ್ತೇಜನ** ನೀಡಲು ದೇಶಾದ್ಯಂತ **ಸಂಶೋಧನೆ, ವಿನ್ಯಾಸ ಮತ್ತು ಪರೀಕ್ಷಾ ಸೌಲಭ್ಯಗಳ ಲಭ್ಯತೆಯ ಖಾತ್ರಿ.**
- ಎಲೆಕ್ಟ್ರಾನಿಕ್ ಉದ್ಯಮದಲ್ಲಿ ಜಾಗತಿಕ ಮೌಲ್ಯ ಸರಪಳಿಯಲ್ಲಿ ಭಾರತವು ಪ್ರಮುಖ ದೇಶವಾಗಲು ಸರ್ವ ಪ್ರಯತ್ನಗಳ ಕ್ರೋಢೀಕರಣ ಮತ್ತು **ಎಲೆಕ್ಟ್ರಾನಿಕ್ಸ್ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಳಕ್ಕೆ ಕ್ರಮ.**
- **ಸೆಮಿಕಂಡಕ್ಟರ್ ಮತ್ತು ಚಿಪ್ ಉತ್ಪಾದನೆಯಲ್ಲಿ** ಅಗ್ರ ರಾಷ್ಟ್ರವಾಗಿರುವ ಭಾರತವನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು **ಉತ್ತಮಗೊಳಿಸಲು ಕ್ರಮ.**
- ಆಟೋಮೊಬೈಲ್ ಉದ್ಯಮದ ಬೆಳವಣಿಗೆಯನ್ನು ಮತ್ತು ವಾಹನಗಳನ್ನು ಎಲೆಕ್ಟ್ರಿಕ್ ವಾಹನಗಳಾಗಿ ಪರಿವರ್ತಿಸಲು ಬೆಂಬಲ, **ಎಲೆಕ್ಟ್ರಿಕ್ ವಾಹನಗಳಿಗೆ ಪ್ರೋತ್ಸಾಹ** ನೀಡಲು **ದೇಶಾದ್ಯಂತ ಇವಿ ಚಾರ್ಜರ್ ಮೂಲಸೌಕರ್ಯವನ್ನು ಸ್ಥಾಪಿಸಲು ಹೂಡಿಕೆ.**



- ಔಷಧೀಯ ವಲಯದಲ್ಲಿ ಅದರಲ್ಲೂ ವಿಶೇಷವಾಗಿ **ಸಕ್ರಿಯ ಔಷಧೀಯ ಘಟಕಾಂಶ** (API)ಗಳ **ಉತ್ಪಾದನೆ** ಮತ್ತು ಸಂಶೋಧನಾ ಸಾಮರ್ಥ್ಯಗಳನ್ನು ಹೆಚ್ಚಿಸುವ ಮೂಲಕ ಭಾರತ ಗಳಿಸಿರುವ **'ವಿಶ್ವದ ಫಾರ್ಮಸಿ'** ಸ್ಥಾನದ ಬಲವರ್ಧನೆ. ಹೊಸ ಔಷಧಗಳು, ರಾಸಾಯನಿಕ ಘಟಕಗಳು ಮತ್ತು ಹೊಸ ಜೈವಿಕ ಘಟಕಗಳಿಗಾಗಿ ಸಂಶೋಧನೆಯಲ್ಲಿ ಹೂಡಿಕೆ ಮಾಡಲು ಕಂಪನಿಗಳನ್ನು ಪ್ರೋತ್ಸಾಹಿಸುವ, ಸಂಶೋಧನಾ ಲಿಂಕ್ಡ್ ಇನ್ಸೆಂಟಿವ್ ಯೋಜನೆಗಳ ಪರಿಚಯ.
- ವಿಶೇಷವಾದ ಭೂಮಿ ಮತ್ತು ಆಯಕಟ್ಟಿನ ಖನಿಜಗಳ ಅನ್ವೇಷಣೆಗೆ ಬೆಂಬಲ. **ಜವಳಿ ಉತ್ಪಾದನೆ, ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಉತ್ತಮ ಸ್ಥಾನ.**
- **ಜವಳಿ, ಗಾರ್ಮೆಂಟ್ ಮತ್ತು ಉಡುಪು ವಲಯದಲ್ಲಿ** ಪ್ರಬಲ ದೇಶವಾಗಿ ಹೊರಹೊಮ್ಮಿರುವ **ಭಾರತದ ಮುಂದಿನ ಹಂತಕ್ಕೆ ಕೊಂಡೊಯ್ಯಲು** ಕ್ರಮ.
- ಹೆಚ್ಚುವರಿ **ಪಿಎಂ ಮಿತ್ರ ಪಾರ್ಕ್‌ಗಳ ಸ್ಥಾಪನೆ.** ಜವಳಿ ಉದ್ಯಮದ ಅಭಿವೃದ್ಧಿಗಾಗಿ ಮೂಲಸೌಕರ್ಯದಲ್ಲಿ **ಹೂಡಿಕೆ, ಉದ್ಯೋಗ ಕೇಂದ್ರಿತ ವಿಶೇಷ ಕೌಶಲ್ಯ ಕಾರ್ಯಕ್ರಮಗಳ ಪ್ರಾರಂಭ.**
- ಸ್ಥಳೀಯ ಕೈಗಾರಿಕೆಗಳು ಮತ್ತು ವಿನ್ಯಾಸಗಳನ್ನು ಜಾಗತಿಕ ಹಂತಕ್ಕೆ ಕೊಂಡೊಯ್ಯಲು **ಸಾಂಪ್ರದಾಯಿಕ ಜವಳಿ ಉದ್ಯಮಗಳಲ್ಲಿ ಹೂಡಿಕೆ.**
- ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಲು ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆಯಲು **ಅತ್ಯಾಧುನಿಕ ತಂತ್ರಜ್ಞಾನ ಮತ್ತು ಸುಸ್ಥಿರ ವಿಧಾನಗಳನ್ನು** ಅಳವಡಿಸಿಕೊಳ್ಳುವ ಮೂಲಕ ನಾವು **ಭಾರತವನ್ನು** ವಜ್ರ ಉತ್ಪಾದನೆಯ ಪ್ರಯೋಗಾಲಯ ಮಾಡಿ, **ಅತಿದೊಡ್ಡ ಉತ್ಪಾದಕರನ್ನಾಗಿ ಮಾಡಲು ಸಂಕಲ್ಪ.**
- ಜೈವಿಕ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ **ಹಸಿರು, ಸ್ವಚ್ಛ ಮತ್ತು ಸಮೃದ್ಧ ಭಾರತಕ್ಕಾಗಿ** ವೃತ್ತಾಕಾರದ ಆರ್ಥಿಕತೆಗೆ ಉತ್ತೇಜನ. **ರಾಷ್ಟ್ರೀಯ ಜೈವಿಕ ಉತ್ಪಾದನಾ ಮಿಷನ್ ಪ್ರಾರಂಭ.**





# ವಿಶ್ವ-ದರ್ಜೆಯ ಮೂಲ ಸೌಕರ್ಯಕ್ಕೆ ಮೋದಿ ಗ್ಯಾರಂಟಿ

- ಪ್ರಯಾಣಿಕರು ಹಾಗೂ ಸರಕು ಸಾಗಣೆಯ ಸಾಮರ್ಥ್ಯವನ್ನು ಹೆಚ್ಚಿಸಲು ರೈಲ್ವೆ ಜಾಲ ವಿಸ್ತರಣೆ, ಕಳೆದ ಹತ್ತು ವರ್ಷಗಳಲ್ಲಿ 31,000 ಕಿಮೀ ರೈಲ್ವೆ ಹಳಿಗಳ ನಿರ್ಮಾಣ, ಮುಂದಿನ ಕೆಲವು ವರ್ಷಗಳವರೆಗೆ **ಪ್ರತಿ ವರ್ಷ 5,000 ಕಿಮೀ ವೇಗದಲ್ಲಿ ಹೊಸ ಟ್ರ್ಯಾಕ್‌ಗಳ ನಿರ್ಮಾಣ.**
- ಕಾಯುವ ಪಟ್ಟಿಯನ್ನು ಗಣನೀಯವಾಗಿ ಕಡಿಮೆ ಮಾಡಲು **2030 ರ ವೇಳೆಗೆ ಪ್ರಯಾಣಿಕರನ್ನು ಕರೆದೊಯ್ಯುವ ಸಾಮರ್ಥ್ಯವನ್ನು ವರ್ಷಕ್ಕೆ 1,000 ಕೋಟಿ** ಪ್ರಯಾಣಿಕರಿಗೆ ಹೆಚ್ಚಳ.
- ದೇಶದಲ್ಲಿ ವಿಶ್ವದರ್ಜೆಯ ಗುಣಮಟ್ಟಕ್ಕೆ ಮರು ಅಭಿವೃದ್ಧಿಗೊಳಿಸಲಾಗುತ್ತಿರುವ **1,300 ರೈಲು ನಿಲ್ದಾಣಗಳ ಯೋಜನೆಯನ್ನು** ಪೂರ್ಣಗೊಳಿಸಿ ಉಳಿದ ನಿಲ್ದಾಣಗಳ ಕೆಲಸಗಳ ಪ್ರಾರಂಭ.
- ಸ್ವದೇಶಿ ಆಟೋಮ್ಯಾಟಿಕ್ ಟ್ರೈನ್ ಪ್ರೊಟೆಕ್ಷನ್ ಸಿಸ್ಟಮ್ "**ಕವಚ್**' ಅಭಿವೃದ್ಧಿಪಡಿಸಲಾಗಿದ್ದು, ಅದರ ವ್ಯಾಪ್ತಿಯನ್ನು ವೇಗವಾಗಿ ವಿಸ್ತರಣೆ, ಮುಂದಿನ ಕೆಲವು ವರ್ಷಗಳಲ್ಲಿ ರೈಲ್ವೆ ಜಾಲವನ್ನು ವಿದ್ಯುದೀಕರಿಸಿದಂತೆಯೇ ಮಿಷನ್ ಮೋಡ್‌ನಲ್ಲಿ ಕವಚ್ ಸಿಸ್ಟಮ್‌ಗಳ ತಯಾರಿಕೆ.
- ವಿಶ್ವ ದರ್ಜೆಯ **ವಂದೇ ಭಾರತ್, ಅಮೃತ್ ಭಾರತ್ ಮತ್ತು ನಮೋ ಭಾರತ್ ರೈಲುಗಳ ಅಭಿವೃದ್ಧಿ,** ಈ ಹೊಸ ಯುಗದ ರೈಲುಗಳ ಜಾಲ ಇನ್ನಷ್ಟು ವಿಸ್ತರಣೆ.
- ಆರಾಮದಾಯಕ ರಾತ್ರಿಯ ಪ್ರಯಾಣಕ್ಕಾಗಿ **ವಂದೇ ಸ್ಲೀಪರ್ ರೈಲುಗಳ** ಪ್ರಾರಂಭ.
- ದೇಶದ ಕಟ್ಟಕಡೆಯ ವ್ಯಕ್ತಿಗೂ ಸಂಪರ್ಕ ದೊರೆಯುವುದನ್ನು ಖಾತ್ರಿಪಡಿಸಲು ಪ್ರಮುಖ

ನಗರ ಕೇಂದ್ರಗಳಲ್ಲಿ **ಮೆಟ್ರೋ ನೆಟ್‌ವರ್ಕ್ ಅನ್ನು ಸ್ಯಾಚುರೇಟ್ ಮಾಡಲು ಯೋಜನೆ.**

- **ಬುಲೆಟ್ ರೈಲು ಕಾರಿಡಾರ್ ನಿರ್ಮಾಣ,** ಬುಲೆಟ್ ಟ್ರೈನ್ ಕಾರ್ಯಕ್ರಮವನ್ನು ಹೊಸ ಕಾರಿಡಾರ್‌ಗಳಿಗೆ ವಿಸ್ತರಣೆ. ಒಂದೇ ಪೋರ್ಟಲ್‌ನಲ್ಲಿ ಬಳಕೆದಾರರಿಗೆ ಎಲ್ಲಾ ರೈಲುಗಳಿಗೆ ಸಂಬಂಧಿಸಿದ ಸೇವೆಗಳನ್ನು ಒದಗಿಸಲು **ಸೂಪರ್ ಅಪ್ಲಿಕೇಷನ್ ಪ್ರಾರಂಭ.**
- **'ಭಾರತ್ ಗೌರವ್ ರೈಲು ಯಾತ್ರೆ'** ಸೇವೆಯ ಮೂಲಕ ನಮ್ಮ ಶ್ರೀಮಂತ ಪರಂಪರೆಯನ್ನು ಅನುಭವಿಸಲು ಭಾರತದಾದ್ಯಂತ ಎಲ್ಲಾ ಪ್ರಮುಖ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಸಂಪರ್ಕಿಸಲು ವಿಸ್ತರಣೆ.
- ಸುಧಾರಿತ ಸಂಪರ್ಕ ಮತ್ತು ಆರೋಗ್ಯ, ಶಿಕ್ಷಣ, ಸರ್ಕಾರಿ ಸೇವೆಗಳು ಮತ್ತು ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ವಸತಿಗಳಿರುವ ದೂರದ ಪ್ರದೇಶಗಳಿಗೆ **ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ವಿಸ್ತರಣೆ.**
- ರಸ್ತೆ ಸುರಕ್ಷತೆಯನ್ನು ಮತ್ತಷ್ಟು ಸುಧಾರಿಸಲು **ಟೆಕ್ನೋ ಕಾನೂನು ಸೇವೆ.** ತರಬೇತಿ ಮತ್ತು ನಡವಳಿಕೆಯ ಬದಲಾವಣೆಗೆ ಹೆಚ್ಚಿನ ಗಮನ.
- ಆಧುನಿಕ ರಸ್ತೆ ಸಂಪರ್ಕ ಪರಿಸರ ವ್ಯವಸ್ಥೆಯನ್ನು **15,000 ಕಿಮೀ ವ್ಯಾಪ್ತಿಯ-ನಿಯಂತ್ರಿತ ಹೆದ್ದಾರಿಗಳಿಗೆ** ಬಲಪಡಿಸಲು ಯೋಜನೆ.
- **ಭಾರತೀಯ ರಸ್ತೆಗಳಲ್ಲಿ 30 ಲಕ್ಷಕ್ಕೂ ಹೆಚ್ಚು ಎಲೆಕ್ಟ್ರಿಕ್ ವಾಹನಗಳ ಸಂಚಾರವನ್ನು ಸುಗಮಗೊಳಿಸಲಾಗಿದೆ.** ಇಗಿಗಳ ಫ್ಲೀಟ್‌ಗಳನ್ನು ಹೆಚ್ಚಿಸಿ, **EV ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆ.**
- ತಡೆರಹಿತ ಸಂಪರ್ಕಕ್ಕಾಗಿ ವಿಮಾನ ನಿಲ್ದಾಣಗಳ ಅಭಿವೃದ್ಧಿ, **ಹೊಸ ವಿಮಾನ ನಿಲ್ದಾಣಗಳು, ಹೆಲಿಪ್ಯಾಡ್‌ಗಳು ಮತ್ತು ಏರೋಡ್ರೋಮ್‌ಗಳ ಅಭಿವೃದ್ಧಿ** ಮತ್ತು ಕಾರ್ಯಾಚರಣೆಯ ಮೂಲಕ ವಾಯು ಸಂಪರ್ಕವನ್ನು ಬಹುಪಟ್ಟು ಹೆಚ್ಚಳಕ್ಕೆ ಕ್ರಮ. ಪ್ರಧಾನಮಂತ್ರಿ ಗತಿಶಕ್ತಿ ರಾಷ್ಟ್ರೀಯ ಮಹಾಯೋಜನೆಯ ಪರಿಣಾಮಕಾರಿ ಬಳಕೆ ಮೂಲಕ ವಿಮಾನ ನಿಲ್ದಾಣಗಳನ್ನು ಬಸ್ಸುಗಳು, ಮೆಟ್ರೋ ಮತ್ತು ಕ್ಷಿಪ್ರ ರೈಲುಗಳಂತಹ ಸಮಗ್ರ ಸಾರಿಗೆ ಸೌಲಭ್ಯಗಳೊಂದಿಗೆ **ಬಹು-ಮಾದರಿ ಕೇಂದ್ರಗಳಾಗಿ** ಪರಿವರ್ತನೆ.
- ವರ್ಧಿತ ಸಂಪರ್ಕ ಮತ್ತು ಆರ್ಥಿಕ ಬೆಳವಣಿಗೆಗೆ ನಮ್ಮ ದೃಷ್ಟಿಕೋನಕ್ಕೆ ಅನುಗುಣವಾಗಿ



**ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಂಖ್ಯೆಯ ಹೆಚ್ಚಳಕ್ಕೆ ಕ್ರಮ.**

- ಭಾರತವನ್ನು ದಕ್ಷಿಣ ಏಷ್ಯಾದ ಪ್ರಮುಖ ವಾಯುಯಾನ ಕೇಂದ್ರವಾಗಿ ರೂಪಿಸುವ ದೃಷ್ಟಿಕೋನದಡಿ ವಿಶ್ವಾದ್ಯಂತ ಗೊತ್ತುಪಡಿಸಿದ ಪ್ರದೇಶಗಳಿಗೆ **ಸಿಂಗಲ್-ಪಾಯಿಂಟ್** ಸಂಪರ್ಕವನ್ನು ಒದಗಿಸುವ ಮೂಲಕ ವಿಮಾನ ನಿಲ್ದಾಣಗಳನ್ನು ಪ್ರಾದೇಶಿಕ ಅಂತರಾಷ್ಟ್ರೀಯ ದರ್ಜೆಯ ಕೇಂದ್ರಗಳಾಗಿ ಪರಿವರ್ತಿಸಲು **ಅಮೃತ್ ಕಾಲ ಸಿವಿಲ್ ಏವಿಯೇಷನ್ ಮಾಸ್ಟರ್ ಪ್ಲಾನ್.**
- ಭಾರತೀಯ ಸಾರಿಗೆಯಲ್ಲಿ ಒಳನಾಡು ಜಲ ಸಾರಿಗೆಯ ಪಾಲನ್ನು ದ್ವಿಗುಣಗೊಳಿಸಲು **ರಾಷ್ಟ್ರೀಯ ಜಲಮಾರ್ಗ ಯೋಜನೆ, ನಮಾಮಿ ಗಂಗೆ, ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆ, ಜಲ ಮಾರ್ಗ ವಿಕಾಸ್ ಯೋಜನೆ** ಮತ್ತು **ಅರ್ಥ ಗಂಗಾ** ಮುಂತಾದ ಅಂತರ್-ಸಚಿವಾಲಯದ ಉಪಕ್ರಮಗಳ ಸಂಯೋಜನೆ.
- ಕಾರ್ಯಸಾಧ್ಯವಾದ ಎಲ್ಲಾ ಪ್ರದೇಶಗಳಲ್ಲಿ ಜಲ ಮೆಟ್ರೋ ಸೇವೆಗಳನ್ನು ವಿಸ್ತರಣೆ. **ನೀರು ಆಧಾರಿತ ಸಾರ್ವಜನಿಕ ಸಾರಿಗೆ ಜಾಲಗಳ ಹೆಚ್ಚಳ,** ಸಂಪರ್ಕದಲ್ಲಿ ಸುಧಾರಣೆ.
- ಜಾಗತಿಕವಾಗಿ ಸ್ಪರ್ಧಾತ್ಮಕವಾಗಲು ಭಾರತೀಯ **ಶಿಪ್ಪಿಂಗ್ ಉದ್ಯಮದ ವೇಗದ ಬೆಳವಣಿಗೆಯನ್ನು** ಸಕ್ರಿಯಗೊಳಿಸಲು **ಕಾನೂನು ಚೌಕಟ್ಟಿನ ನವೀಕರಣ.**





# ಇಂಧನ ಭದ್ರತೆ

- 2047 ರ ವೇಳೆಗೆ ದೇಶದಲ್ಲಿ **ಇಂಧನ ಸ್ವಾವಲಂಬನೆಯ** ಸಾಧನೆ. ಇಂಧನ ಉತ್ಪಾದನೆ ಮತ್ತು ಇಂಧನ ದಕ್ಷತೆಯನ್ನು ಸುಧಾರಿಸುವ ಮೂಲಕ ಪೆಟ್ರೋಲಿಯಂ ಆಮದು ಪ್ರಮಾಣ ಕಡಿಮೆ.

- **ಭಾರತದಾದ್ಯಂತದ ಮನೆಗಳಿಗೆ ಎಲೆಕ್ಟ್ರಿಕ್ ಸ್ಟವ್‌ಗಳು, ಫ್ಯಾನ್, ಎಸಿ, ಟಿವಿ** ಮುಂತಾದ ಸಾಧನಗಳನ್ನು ಅಳವಡಿಸಿಕೊಳ್ಳಲು ಉತ್ತೇಜನ. ಇದರಿಂದ ವಾರ್ಷಿಕ ರೂ 18,000 ವರೆಗೆ ಹಣ ಉಳಿತಾಯ.

- ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳ (ಎಸ್‌ಎಂಆರ್) ಮೇಲೆ ಗಮನ ಕೇಂದ್ರೀಕರಿಸಿ **ಪರಮಾಣು ಶಕ್ತಿ ಉತ್ಪಾದನೆಯಲ್ಲಿ ಹೆಚ್ಚಿನ ಹೂಡಿಕೆಯ** ಮೂಲಕ **ಇಂಧನ ಮಿಶ್ರಣದ ಪರಮಾಣು ಶಕ್ತಿ ಘಟಕ ವಿಸ್ತರಣೆ.**

- ರೈತರಿಗೆ ಹೆಚ್ಚುವರಿ ಆದಾಯವನ್ನು ಒದಗಿಸುವ ಜೊತೆಗೆ ಪರಿಸರದ ಮಾಲಿನ್ಯ ತಗ್ಗಿಸಲು **ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಬಳಕೆಯ** ಹೆಚ್ಚಳ. ದೇಶದಲ್ಲಿ ಲಭ್ಯವಿರುವ ನವೀಕರಿಸಬಹುದಾದ ಇಂಧನ ಶಕ್ತಿ ಸಾಮರ್ಥ್ಯವನ್ನು ಬಳಸಿಕೊಳ್ಳಲು **ಮೆಗಾ ಸೋಲಾರ್ ಪಾರ್ಕ್‌ಗಳು, ವಿಂಡ್ ಪಾರ್ಕ್‌ಗಳು ಮತ್ತು ಗ್ರೀನ್ ಎನರ್ಜಿ ಕಾರಿಡಾರ್‌ಗಳ ಸ್ಥಾಪನೆ.**

- ನವೀಕರಿಸಬಹುದಾದ ಶಕ್ತಿಯ ಏಕೀಕರಣ, ಗ್ರಿಡ್ ಸ್ಥಿರತೆ ಮತ್ತು ಸ್ಥಿತಿಸ್ಥಾಪಕತ್ವವನ್ನು ಉತ್ತೇಜಿಸಲು, ಎಲ್ಲರಿಗೂ ಸುಸ್ಥಿರ ಮತ್ತು ವಿಶ್ವಾಸಾರ್ಹ ಇಂಧನ ಭವಿಷ್ಯವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ದೊಡ್ಡ ಪ್ರಮಾಣದ **ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ಸ್** (BESS) ಮೂಲಸೌಕರ್ಯದಲ್ಲಿ ಖಾಸಗಿ ವಲಯದ ಹೂಡಿಕೆಗೆ ಪ್ರೋತ್ಸಾಹ.

- ಹಸಿರು ಹೈಡ್ರೋಜನ್ ಉತ್ಪಾದನೆಯನ್ನು ವಿಸ್ತರಿಸಲು, ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಮತ್ತು ಪ್ರಮುಖ **ಹಸಿರು ಹೈಡ್ರೋಜನ್ ಉತ್ಪಾದನಾ ಕೇಂದ್ರವಾಗಲು** ಹೂಡಿಕೆ.

- ಸಮರ್ಥ ಮತ್ತು ಸಮರ್ಪಕ ಶಕ್ತಿ ನಿರ್ವಹಣೆಗಾಗಿ ಸ್ಮಾರ್ಟ್ ಮೀಟರ್‌ಗಳು ಮತ್ತು ನಿಯಂತ್ರಣ ಕೇಂದ್ರಗಳನ್ನು ಒಳಗೊಂಡಂತೆ ಸುಧಾರಿತ ತಂತ್ರಜ್ಞಾನದೊಂದಿಗೆ ಸಂಯೋಜಿಸಲ್ಪಟ್ಟ **ರಾಷ್ಟ್ರವ್ಯಾಪಿ ಸ್ಮಾರ್ಟ್ ಗ್ರಿಡ್‌ಗಳ ಸ್ಥಾಪನೆ.**

- ಶುದ್ಧ ಇಂಧನ ತಂತ್ರಜ್ಞಾನಗಳಿಗಾಗಿ ಉತ್ಕೃಷ್ಟತೆಯ ಕೇಂದ್ರ ಸ್ಥಾಪನೆ. ಗಾಳಿ, ಸೌರ ಮತ್ತು ಹಸಿರು ಹೈಡ್ರೋಜನ್‌ಗಾಗಿ ದೇಶವನ್ನು **ಜಾಗತಿಕ ಉತ್ಪಾದನಾ ಕೇಂದ್ರ ಸ್ಥಾಪನೆ.**




# ಸುಲಲಿತ ನಗರ ಜೀವನಕ್ಕಾಗಿ ಮೋದಿ ಗ್ಯಾರಂಟಿ

- ಭೂಮಿಯ ವೆಚ್ಚ, ನಿರ್ಮಾಣ ವೆಚ್ಚ, ಹಣಕಾಸು ವೆಚ್ಚ ಮತ್ತು ನೋಂದಣಿ ವೆಚ್ಚವನ್ನು ಕಡಿಮೆ ಮಾಡಲು ನೀತಿ ಚೌಕಟ್ಟು ರಚನೆ. **ಮಧ್ಯಮ-ಆದಾಯದ ಕುಟುಂಬಗಳಿಗೆ ಗೃಹ ಸಾಲಕ್ಕಾಗಿ ಬಡ್ಡಿ ರಿಯಾಯಿತಿ ಯೋಜನೆ.**
- ಭಾರತದಾದ್ಯಂತ ಮೆಟ್ರೋ ನಗರಗಳ ಬಳಿ ಹೊಸ **ಸ್ಯಾಟಲೈಟ್ ಟೌನ್‌ಶಿಪ್**‌ಗಳ ರಚನೆಗೆ ಪ್ರೋತ್ಸಾಹ.
- ಎಲ್ಲರಿಗೂ ಅನುಕೂಲಕರ, ಸ್ಥಿರ ಮತ್ತು ಸುರಕ್ಷಿತ ಇಂಧನ ಮೂಲವನ್ನು ಖಾತ್ರಿಗಾಗಿ **ಪೈಪ್‌ಲೈನ್ ಮೂಲಕ ಅಡುಗೆ ಅನಿಲ ಸಂಪರ್ಕ.**
- ಬಹು-ಮಾದರಿ ಸಾರಿಗೆ ಸೌಲಭ್ಯಗಳನ್ನು ಸಂಯೋಜಿಸುವ ಮತ್ತು ನಗರಗಳಲ್ಲಿ ಪ್ರಯಾಣದ ಸಮಯವನ್ನು ಕಡಿಮೆ ಮಾಡುವ **ಏಕೀಕೃತ ಮೆಟ್ರೋಪಾಲಿಟನ್ ಸಾರಿಗೆ ವ್ಯವಸ್ಥೆ.**
- ಜನರಿಗೆ ಕೈಗೆಟುಕುವ ಮತ್ತು ಸುರಕ್ಷಿತ ಸಾರಿಗೆಯನ್ನು ಕಲ್ಪಿಸಲು ನಗರಗಳಾದ್ಯಂತ **ಇ-ಬಸ್‌ನ ಫ್ಲೀಟ್** ಪರಿಚಯಿಸಲು PM-eBus ಸೇವಾ ಯೋಜನೆ ಪ್ರಾರಂಭ.
- ಜಲ-ಸುರಕ್ಷಿತ ನಗರಗಳನ್ನು ನಿರ್ಮಿಸಿ, ತ್ಯಾಜ್ಯ ನೀರಿನ ಸಂಸ್ಕರಣೆ, ಆಕ್ವಿಫರ್ ರೀಚಾರ್ಜ್ ಮತ್ತು ಬೃಹತ್ ಪ್ರಮಾಣದ ಗ್ರಾಹಕರಿಗೆ **ಸ್ಮಾರ್ಟ್ ಮೀಟರಿಂಗ್**‌ಗಾಗಿ ಉತ್ತಮ ವಿಧಾನ.
- ನಗರ ಪ್ರದೇಶಗಳ ಪರಿಸರವನ್ನು ಪುನರುಜ್ಜೀವನಗೊಳಿಸಲು ಮತ್ತು ಜನರ ಜೀವನದ ಗುಣಮಟ್ಟವನ್ನು ಸುಧಾರಿಸುವ ದೃಷ್ಟಿಯಿಂದ ಕೇಂದ್ರ ರಾಜ್ಯ-ನಗರ ಪಾಲುದಾರಿಕೆಯೊಂದಿಗೆ **ದೀರ್ಘಾವಧಿಯ ಮೂಲಸೌಕರ್ಯ ಯೋಜನೆ**ಗಳ ಪ್ರಾರಂಭ.

- ಉದ್ಯಾನವನಗಳು, ಆಟದ ಮೈದಾನಗಳಂತಹ ಹಸಿರು ಸ್ಥಳಗಳ ಅಭಿವೃದ್ಧಿ, ಜಲಮೂಲಗಳ ಪುನರುಜ್ಜೀವನ, ನಗರಗಳನ್ನು ಹೆಚ್ಚು ಸುಸ್ಥಿರ ಮತ್ತು ಜನಸ್ನೇಹಿಯನ್ನಾಗಿ ರೂಪಿಸಲು **ನೈಸರ್ಗಿಕ ಸ್ಥಳಗಳ ಅಭಿವೃದ್ಧಿ.**
- **ಕಸದಿಂದ ರಸ** ಎಂಬ ಪರಿಕಲ್ಪನೆಯಲ್ಲಿ (ವೇಸ್ಟ್ ಟು ವೆಲ್ತ್ ಮಿಷನ್') ಮೂಲಕ ಭಾರತದಲ್ಲಿ ಉತ್ಪತ್ತಿಯಾಗುವ ಎಲ್ಲಾ ರೀತಿಯ ತ್ಯಾಜ್ಯವನ್ನು ನಿರ್ವಹಿಸಲು ತೆರೆದ ಲ್ಯಾಂಡ್ ಫಿಲ್‌ಗಳನ್ನು ಮುಚ್ಚುವುದರ ಮುಂದುವರಿಕೆ.
- ನಗರ ಭೂ ವ್ಯವಸ್ಥೆಯ ಬಲವರ್ಧನೆಗೆ **ಭೂ ದಾಖಲೆಗಳ ಡಿಜಿಟಲೀಕರಣ** ವ್ಯವಸ್ಥೆ ರಚನೆ.
- ತಂತ್ರಜ್ಞಾನವನ್ನು ಬಳಸಿಕೊಂಡು **ಆಧುನಿಕ ಶಾಸನಗಳು, ಉಪ ಕಾನೂನುಗಳು** ಮತ್ತು **ನಗರ ಯೋಜನೆ ಪ್ರಕ್ರಿಯೆ**ಗಳನ್ನು ರಚಿಸಲು ರಾಜ್ಯ ಸರ್ಕಾರಗಳು ಮತ್ತು ನಗರಗಳೊಂದಿಗೆ ಕಾರ್ಯ ಯೋಜನೆ.
- ಇಡೀ ದೇಶದೆಲ್ಲಡೆ **ಜಾಗತಿಕ ಸಮ್ಮೇಳನ** ಮತ್ತು **ಪ್ರದರ್ಶನ ಕೇಂದ್ರ**ಗಳ ಸ್ಥಾಪನೆ.
- ನಗರಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ನಗರ ಹಣಕಾಸು, ನಗರ ಮೂಲಸೌಕರ್ಯ, ನಗರ ಪರಿಸರ ಸಂರಕ್ಷಣೆ, ನಗರ ನೀರಿನ ನಿರ್ವಹಣೆ, ನಗರ ಸಾರಿಗೆ ಮತ್ತು ಹೆಚ್ಚಿನವುಗಳನ್ನು ಕಲಿಸಲು **ಹೊಸ ಪಠ್ಯಕ್ರಮ.**





# ಸಾಂಸ್ಕೃತಿಕ ಪರಂಪರೆಯ ವಿಕಾಸಕ್ಕೆ ಮೋದಿ ಗ್ಯಾರಂಟಿ

- ಕಾಶಿ ವಿಶ್ವನಾಥ ಕಾರಿಡಾರ್ ಮಾದರಿಯಲ್ಲಿ ದೇಶದ ಉದ್ದಗಲಕ್ಕೂ ಇರುವ **ಧಾರ್ಮಿಕ** ಮತ್ತು **ಪ್ರವಾಸಿ ತಾಣ**ಗಳನ್ನು ಅಭಿವೃದ್ಧಿಗೆ ಯೋಜನೆ.
- ಜಗತ್ತಿನ ಉದ್ದಗಲಿಂದ ಬರುವ ರಾಮ ಭಕ್ತರ ಅನುಕೂಲಕ್ಕೆ **ಅಯೋಧ್ಯೆಯ ಸಮಗ್ರ ಅಭಿವೃದ್ಧಿ.**
- ಹಸ್ತಪ್ರತಿಗಳು ಮತ್ತು ಎಪಿಗ್ರಾಫ್‌ಗಳ ಡಿಜಿಟಲೀಕರಣ, ಪ್ರಾಚೀನ ಭಾರತೀಯ ಹಸ್ತಪ್ರತಿಗಳು ಮತ್ತು ಶಾಸನಗಳನ್ನು ಸಂಶೋಧಿಸಲು **ವಿದ್ಯಾರ್ಥಿವೇತನ** ನಿಡುವ ಯೋಜನೆ.
- ತಂತ್ರಜ್ಞಾನದ ವ್ಯಾಪಕ ಬಳಕೆಯ ಮೂಲಕ ಪ್ರಾಚೀನ ಭಾರತೀಯ ನಾಗರಿಕತೆ, ಶಾಸ್ತ್ರೀಯ ಭಾಷೆಗಳು, ಸಂಸ್ಕೃತಿ ಮತ್ತು ಸಂಪ್ರದಾಯಗಳ ಸಂರಕ್ಷಣೆ ಮಾಡಲು **ಭಾರತೀಯ ಸಂಸ್ಕೃತಿ ಕೋಶವನ್ನು ಸ್ಥಾಪನೆ.**
- **"ಯುಗೆ ಯುಗೀನ್"** ಭಾರತ ರಾಷ್ಟ್ರೀಯ ಮ್ಯೂಸಿಯಂ ಸ್ಥಾಪನೆಗೆ ವೇಗ, ಭಾರತದ ಐತಿಹಾಸಿಕ ಸಾಂಸ್ಕೃತಿ ವೈಭವವನ್ನು ಜಗತ್ತಿಗೇ ಪರಿಚಯಿಸುವ ಮ್ಯೂಸಿಯಂ ಸ್ಥಾಪನೆ.
- ಪ್ರಾಚೀನ ಭಾರತೀಯ ಸಾಹಿತ್ಯ ಕೃತಿಗಳನ್ನು ವಿದೇಶಿ ಭಾಷೆಗಳಿಗೆ ಅನುವಾದ ಮಾಡುವುದಕ್ಕೆ ಉತ್ತೇಜನ.

- **ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ** (WIPO) ಮತ್ತು **ಯುನೆಸ್ಕೊದಂತಹ** ಅಂತರಾಷ್ಟ್ರೀಯ ಸಂಸ್ಥೆಗಳೊ ಸಹಯೋಗದೊಂದಿಗೆ ಭಾರತದ ಸಾಂಸ್ಕೃತಿಕ ಬೌದ್ಧಿಕ ಆಸ್ತಿಗಳ ರಕ್ಷಣೆಗಾಗಿ **ಕಾನೂನು ನೀತಿ ನಿಯಮಗಳ ರಚನೆ.**
- ಭಾರತೀಯ ಜ್ಞಾನ ಸಂಪ್ರದಾಯಗಳ ಆದರಿತ **ತ್ರೈವಾರ್ಷಿಕ ಅಂತಾರಾಷ್ಟ್ರೀಯ ಸಮ್ಮೇಳನಗಳ** ಆಯೋಜನೆ.
- ನಮ್ಮ ಮುಂದಿನ ತಲೆಮಾರಿಗೆ ಸಾಂಸ್ಕೃತಿಕವಾಗಿ ಮಹತ್ವ ಪಡೆದ ಹಾಗೂ **ಭಾರತೀಯ ಪುರಾತತ್ವ** ಸಮೀಕ್ಷೆಯಲ್ಲಿ ಗುರುತಿಸಲಾದ **ಸ್ಮಾರಕಗಳ ಅಭಿವೃದ್ಧಿ.**
- ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿಗಾಗಿ **ಸ್ವದೇಶ ದರ್ಶನ** ಕಾರ್ಯಕ್ರಮವನ್ನು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಕ್ರಮ. ಪ್ರಮುಖ ಸಂತರು ಮತ್ತು **ದಾರ್ಶನಿಕರ ಜೀವನ** ಮತ್ತು ಪ್ರಯಾಣವನ್ನು ಒಳಗೊಂಡಿರುವ **ಸ್ಥಳಗಳು ಮತ್ತು ಸರ್ಕ್ಯೂಟ್‌ಗಳ ಅಭಿವೃದ್ಧಿ.**

### ಸಾಂಸ್ಕೃತಿಕ ಅನುಭವಗಳನ್ನು ಮೆಲುಕು ಹಾಕಲು ವಿಷಯಾಧಾರಿತ ಸರ್ಕ್ಯೂಟ್‌ಗಳ ಅಭಿವೃದ್ಧಿ

- ಭಾರತದ ಗಡಿ **ಗ್ರಾಮವಾಸಿಗಳ ಜೀವನ ಶೈಲಿ** ಮತ್ತು ಸಂಸ್ಕೃತಿಯನ್ನು ಅರಿಯಲು ಯೋಜನೆ.
- ಭಾರತದಾದ್ಯಂತ **ಪರಿಸರ ಪ್ರವಾಸೋದ್ಯಮ** (Ecotourism)ಕ್ಕೆ ಉತ್ತೇಜನ ಕೊಡಲು ಕ್ರಮ.
- ಭಾರತದ ಎಲ್ಲಾ ಪ್ರಮುಖ ನದಿ ಪರಿಸರದ ಉದ್ದಕ್ಕೂ **ನದಿ ಪ್ರವಾಸೋದ್ಯಮದ** ಅಭಿವೃದ್ಧಿ.
- ಲಕ್ಷದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ **ದ್ವೀಪ ಪ್ರವಾಸೋದ್ಯಮ** ಕೇಂದ್ರ ಸ್ಥಾಪನೆ.
- ಈಶಾನ್ಯ ಭಾರತ ಮತ್ತು ಇತರ ಗುಡ್ಡಗಾಡು ರಾಜ್ಯಗಳಲ್ಲಿ **ಸಾಹಸ ಪ್ರವಾಸೋದ್ಯಮಕ್ಕೆ** ಒತ್ತು.
- ನಮ್ಮ ವೈವಾಹಿಕ ಸಂಪ್ರದಾಯಗಳ ಬಗ್ಗೆ ಬೆಳಕು ಚೆಲ್ಲಲು ಮತ್ತು ಸಾಂಸ್ಕೃತಿಕ ವಿನಿಮಯಕ್ಕೆ ಉತ್ತೇಜನ ನೀಡಲು ಭಾರತದಾದ್ಯಂತ ಆಯ್ದ ಸ್ಥಳಗಳನ್ನು **ವಿವಾಹದ ಆದ್ಯತೆಯ ಸ್ಥಳಗಳ ಕುರಿತ ಪ್ರಚಾರ.**





# ಉತ್ತಮ ಆಡಳಿತಕ್ಕೆ ಮೋದಿ ಗ್ಯಾರಂಟಿ

### ಭ್ರಷ್ಟಾಚಾರದ ವಿರುದ್ಧ ಸಮರ

- ಭ್ರಷ್ಟಾಚಾರರಹಿತ, ಪಾರದರ್ಶಕ ಮತ್ತು ಜವಾಬ್ದಾರಿಯುತ ಆಡಳಿತ.
- ಭ್ರಷ್ಟಾಚಾರದ ವಿರುದ್ಧದ ಕಾನೂನುಗಳ ಕಟ್ಟುನಿಟ್ಟಿನ ಅನುಷ್ಠಾನ
- ತಂತ್ರಜ್ಞಾನದ ಬಳಕೆಯ ಮೂಲಕ ಭ್ರಷ್ಟಾಚಾರ ವಿರುದ್ಧದ ಹೋರಾಟ ಮುಂದುವರಿಕೆ

### ಏಕ ರೂಪ ನಾಗರಿಕ ಸಂಹಿತಜಾರಿ

- ಏಕರೂಪ ನಾಗರೀಕ ಸಂಹಿತೆಯ ಮೂಲಕ ಮಾತ್ರ ಲಿಂಗ ಸಮಾನತೆತರಲು ಸಾಧ್ಯಎಂದು ಬಿಜೆಪಿಯ ನಂಬಿಕೆ
- ಈಗಿನ ಕಾಲಕ್ಕನುಗುಣವಾಗಿಏಕರೂಪ ನಾಗರೀಕ ಸಂಹಿತೆಯನ್ನು ಜಾರಿಗೊಳಿಸುವ ನಿಲುವಿಗೆ ಬಿಜೆಪಿ ಬದ್ಧ.

### ಪಂಚಾಯತ್‌ರಾಜ್ ವ್ಯವಸ್ಥೆಗೆ ಹಣಕಾಸು ಸ್ವಾತಂತ್ರ್ಯ

- ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಬಲಪಡಿಸಲು ಅದಕ್ಕೆ ಅವಶ್ಯವಿರುವ ಹಣಕಾಸಿನ ಸ್ವಾಯತ್ತತೆಗೆ ಅಗತ್ಯ ಕ್ರಮ.

### ರಾಷ್ಟ್ರೀಯ ವ್ಯಾಜ್ಯ ನೀತಿ ಜಾರಿ

- ನ್ಯಾಯಾಲಯಗಳ ಪ್ರಕರಣಗಳನ್ನು ತ್ವರಿತ ಇತ್ಯರ್ಥಗೊಳಿಸಲು
- ನ್ಯಾಯಾಲಯದ ನಿರ್ವಹಣೆ ಮತ್ತು ಪ್ರಕ್ರಿಯೆಗಳ ವೆಚ್ಚವನ್ನು ಕಡಿಮೆಗೊಳಿಸಲು
- ನ್ಯಾಯಾಲಯಗಳ ಮೇಲಿರುಒತ್ತಡ ಕಡಿಮೆಗೊಳಿಸಲು ರಾಷ್ಟ್ರೀಯ ವ್ಯಾಜ್ಯ ನೀತಿಜಾರಿ.

### ಸಿವಿಲ್ ಪ್ರಕ್ರಿಯೆಗಳಲ್ಲಿ ಸುಧಾರಣೆ

- ಕ್ರಿಮಿನಲ್ ಪ್ರಕರಣಗಳ ನ್ಯಾಯಸುಧಾರಣೆಗಳ ಮಾದರಿಯಲ್ಲಿ ವಾಣಿಜ್ಯ ಮತ್ತು ನಾಗರೀಕ ನ್ಯಾಯ ವ್ಯವಸ್ಥೆಗಳ ಕೂಲಂಕಷವಾಗಿ ಪರಿಶೀಲನೆ.
- ಈ ಪರಿಷ್ಕರಣೆಯುಸಿವಿಲ್ ವ್ಯವಸ್ಥೆಯ ಕಾರ್ಯವಿಧಾನಗಳನ್ನು ಸುಗಮಗೊಳಿಸಿ, ಕಾನೂನು ಪ್ರಕ್ರಿಯೆಗಳ ದಕ್ಷತೆಯನ್ನು ಹೆಚ್ಚಿಸುವಗುರಿ.
- ವ್ಯಾಪಾರಸ್ನೇಹಿ ಮತ್ತು ನಾಗರೀಕಕೇಂದ್ರಿತ ಕಾನೂನು ರೂಪಿಸಲು ಪ್ರೋತ್ಸಾಹ.

## ಸಾರ್ವಜನಿಕ ಸೇವೆಯಲ್ಲಿ ಸುಧಾರಣೆ

- ತಂತ್ರಜ್ಞಾನದ ಮೂಲಕ ಸಾಮಾನ್ಯ ಸೇವಾ ಕೇಂದ್ರಗಳು(CSCs) ಮತ್ತು ಅಂಚೆ ಕಚೇರಿಗಳ ಮೂಲಕ ಸಾರ್ವಜನಿಕ ಸೇವೆಗಳನ್ನು ನೀಡಲು ಮಹತ್ತರ ಬದಲಾವಣೆ.
- ಬಹು ಭಾಷೆಗಳಲ್ಲಿ ಸೇವೆ ಒದಗಿಸಲು ಭಾಷಿಣಿ ಸರ್ವರ್ ಬಳಕೆ.
- MyGov ನಂತಹತಂತ್ರಜ್ಞಾನ ವೇದಿಕೆಗಳ ಮೂಲಕ ನೀತಿರಚನೆಯಲ್ಲಿ ನಾಗರೀಕರಸಹಭಾಗಿತವದಲ್ಲಿ ಹೆಚ್ಚಳ.

## ಅಂಕಿ ಅಂಶಗಳ ಸಂಸ್ಥೆಗಳಿಗೆ ಹೆಚ್ಚಿನ ಬಲ

- ದತ್ತಾಂಶ ವಿಶ್ಲೇಷಣೆ ಮೂಲಕ ನೀತಿರಚನೆಗೆ ಪ್ರೋತ್ಸಾಹಿಸಿ, ಅಂಕಿ ಅಂಶಗಳ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವಗುರಿ.

## ಮತದಾನ ಸುಧಾರಣೆಗಳು

- ಏಕಕಾಲಕ್ಕೆ ಚುನಾವಣೆ ನಡೆಸಿದರೆ ಉಂಟಾಗುವ ಸಾಧಕ – ಬಾಧಕಗಳನ್ನು ಪರಿಶೀಲಿಸಲು ಪ್ರತ್ಯೇಕವಾಗಿ ರಚಿಸಿರುವ ಉನ್ನತ ಮಟ್ಟದ ಸಮಿತಿ ಮಾಡುವ ಶಿಫಾರಸ್ಸಿನ ಅನುಷ್ಠಾನಕ್ಕೆ ಕ್ರಮ.
- ಎಲ್ಲಾ ಹಂತದ ಚುನಾವಣೆಗಳಲ್ಲೂ ಏಕೀಕೃತ ಮತದಾರರ ಪಟ್ಟಿಗೆ ನಿಬಂಧನೆಗಳ ಸೇರ್ಪಡೆ.

## ನೌಕರರು ಮತ್ತು ಪೊಲೀಸ್ ಸಿಬ್ಬಂದಿಯ ಕಲ್ಯಾಣ

- ಕರ್ಮಯೋಗಿ ಯೋಜನೆಯನ್ನು ಎಲ್ಲಾ ಕೇಂದ್ರ ಸರ್ಕಾರಿ ನೌಕರರಿಗೂ ವಿಸ್ತರಣೆ.. ದಕ್ಷ ಮತ್ತು ಉತ್ತಮ ಆಡಳಿತಕ್ಕಾಗಿ ಸ್ಪಂದಿಸುವ, ಹೆಚ್ಚು ಸಮರ್ಥ ಮತ್ತು ತಂತ್ರಜ್ಞಾನ ಸ್ನೇಹಿ ಕಾರ್ಯಪಡೆಗೆ ಉತ್ತೇಜನ.
- ಪೊಲೀಸ್ ಆಧುನೀಕರಣ ಯೋಜನೆಯ ಮೂಲಕ ಪೊಲೀಸರನ್ನು ತಂತ್ರಜ್ಞಾನ ಸ್ನೇಹಿ, ತಂತ್ರಜ್ಞಾನ–ತರಬೇತಿ ಪಡೆದ ಸುಸಜ್ಜಿತ ಪಡೆಯಾಗಿ ಪರಿವರ್ತಿಸಲು ರಾಜ್ಯಗಳಿಗೆ ಸಹಾಯ.

## ನ್ಯಾಯಾಂಗ ಸುಧಾರಣೆ

- ನ್ಯಾಯಾಲಯದ ಸಂಪೂರ್ಣ ದಾಖಲೆಗಳ ಡಿಜಿಟಲೀಕರಣವನ್ನು ಪೂರ್ಣಗೊಳಿಸಲು ಮತ್ತು ಆನ್ ಲೈನ್ ನಲ್ಲಿ ನ್ಯಾಯಾಲಯದ ಕಲಾಪಗಳನ್ನು ಸುಲಭವಾಗಿ ಮಾಡಲು ಇ-ಕೋರ್ಟ್ಸ್ ಮಿಷನ್ ಮೋಡ್ ಯೋಜನೆಗೆ ವೇಗ.
- ಬಾಕಿ ಇರುವ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ನಿಗದಿತ ನಗರಗಳಲ್ಲಿ ತ್ವರಿತ ನ್ಯಾಯಾಲಯಗಳ ಸ್ಥಾಪನೆ.
- ದೇಶದಲ್ಲಿ ಮಧ್ಯಸ್ಥಿಕೆಯ ಮೂಲಕ ವಿವಾದಗಳ ಪರಿಹಾರಕ್ಕೆ ಸೂಕ್ತ ವಾತಾವರಣ ನಿರ್ಮಿಸಲು, ಉತ್ತೇಜಿಸಲು ಕಾನೂನು ಚೌಕಟ್ಟನ್ನು ಮತ್ತಷ್ಟು ಸುಧಾರಿಸುವ ನಿಟ್ಟಿನಲ್ಲಿ ಕ್ರಮ.






# ಸ್ವಸ್ಥ ಭಾರತಕ್ಕೆ ಮೋದಿ ಗ್ಯಾರಂಟಿ

- ಎಲ್ಲರಿಗೂ ಕೈಗೆಟುಕುವ ಮತ್ತು ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಸಲುವಾಗಿ ಈಗಿರುವ **15 ಏಮ್ಸ್‌ಗಳ ಜಾಲ** ವಿಸ್ತರಣೆ.
- ಏಮ್ಸ್ ಮತ್ತು ವಿವಿಧ ವೈದ್ಯಕೀಯ ಕಾಲೇಜುಗಳ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ ವೈದ್ಯಕೀಯ ಶಿಕ್ಷಣದಲ್ಲಿ **ಯುಜಿ ಮತ್ತು ಪಿಜಿ ಸೀಟುಗಳ ಸಂಖ್ಯೆ ಹೆಚ್ಚಳ.**
- PM-ABHIM (PM–ಆಯುಷ್ಮಾನ್ ಭಾರತ್ ಹೆಲ್ತ್ ಇನ್ಫ್ರಾಸ್ಟ್ರಕ್ಚರ್ ಮಿಷನ್) ಅಡಿಯಲ್ಲಿ ದ್ವಿತೀಯ ಮತ್ತು ಪ್ರಾಥಮಿಕ ಆರೋಗ್ಯ ರಕ್ಷಣೆಯನ್ನು ನವೀಕರಣ, ದೃಢವಾದ ಆರೋಗ್ಯ ರಕ್ಷಣೆಗಾಗಿ ನಾವು **PM-ABHIM** ಅನ್ನು ಮತ್ತಷ್ಟು ವಿಸ್ತರಣೆ.
- ಆಯುಷ್ಮಾನ್ ಆರೋಗ್ಯ ಕೇಂದ್ರಗಳ ಬಲವರ್ಧನೆ, ಸಮಗ್ರ ಆರೋಗ್ಯ ರಕ್ಷಣೆಗಾಗಿ ಜಿಲ್ಲಾ ಆಸ್ಪತ್ರೆಗಳು ಮತ್ತು ಇತರ **ಮಾಧ್ಯಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ.**
- ದೇಶಾದ್ಯಂತ ನಾಗರಿಕರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಔಷಧಿಗಳನ್ನು ಒದಗಿಸಲು **ಜನೌಷಧಿ ಕೇಂದ್ರದ ಜಾಲ.**
- ಅಪಘಾತಕ್ಕೆ ಒಳಗಾದ ರೋಗಿಗಳಿಗೆ ತಕ್ಷಣದ ಮತ್ತು ಪರಿಣಾಮಕಾರಿ ಆರೈಕೆಯನ್ನು ಒದಗಿಸಲು **ತುರ್ತು ಮತ್ತು ಅಪಘಾತ ಆರೈಕೆ ಮಿಷನ್ ಪ್ರಾರಂಭ.**
- ಕ್ಷಯ, ಕುಷ್ಠರೋಗ, ದುಗ್ಧರಸ ಫಿಲೇರಿಯಾಸಿಸ್, ದಡಾರ, ರುಬೆಲ್ಲಾ, ಟ್ರಕೋಮಾ ಮತ್ತು ಕಾಲಾ ಅರ್ಜನಂಥ ರೋಗಗಳ ನಿರ್ಮೂಲನೆಗಾಗಿ **ಅಸ್ತಿತ್ವದಲ್ಲಿರುವ ಯೋಜನೆಗಳಿಗೆ ಚುರುಕು.**
- ಉತ್ಪಾದನೆ ಮತ್ತು ವಿತರಣೆಯನ್ನು ಹೆಚ್ಚಿಸಲು, ಲಸಿಕೆ ತಯಾರಿಕೆ ಸಮಯ ಕಡಿತಗೊಳಿಸಲು **ಭಾರತೀಯ ಲಸಿಕೆ ತಯಾರಕರು ಮತ್ತು ಬಯೋ ಫಾರ್ಮಾ ಕಂಪನಿಗಳಿಗೆ ಪ್ರೋತ್ಸಾಹ.**
- ಅರೆವೈದ್ಯರು, ತಂತ್ರಜ್ಞರು, ಫಾರ್ಮಾಸಿಸ್ಟ್‌ಗಳು ಮತ್ತು ನರ್ಸ್‌ಗಳಿಗೆ **ತರಬೇತಿ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನಗಳಿಗೆ ಬಲ.**
- ಮಾನಸಿಕ ಆರೋಗ್ಯಕ್ಕಾಗಿ ಯೋಗ ಮತ್ತು ಧ್ಯಾನ ಸೇರಿದಂತೆ ನಮ್ಮ ಸಾಂಪ್ರದಾಯಿಕ ವಿಧಾನಗಳ ಬಲವರ್ಧನೆ. **ಮಾನಸ್ ಮತ್ತು ಮನೋದರ್ಪಣದಂತಹ ಮಾನಸಿಕ ಆರೋಗ್ಯ ಉಪಕ್ರಮಗಳ ವ್ಯಾಪ್ತಿ ವಿಸ್ತರಣೆ.**



# ಗುಣಮಟ್ಟದ ಶಿಕ್ಷಣಕ್ಕೆ ಮೋದಿ ಗ್ಯಾರಂಟಿ

- ಕಳೆದ ದಶಕದಲ್ಲಿ ಸ್ಥಾಪಿಸಲಾದ **7 ಐಐಟಿಗಳು, 16 ಐಐಐಟಿಗಳು, 7 ಐಐಎಂಗಳು, 15 ಏಮ್ಸ್, 317 ವೈದ್ಯಕೀಯ ಕಾಲೇಜು** ಮತ್ತು **390 ವಿಶ್ವವಿದ್ಯಾಲಯ**ಗಳನ್ನು ಬಲಪಡಿಸಲು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಲು ಬದ್ಧ.
- **ಪ್ರಧಾನಮಂತ್ರಿ ಇ-ವಿದ್ಯಾ** ಅಡಿಯಲ್ಲಿ ಸ್ವಯಂ, ಸ್ವಯಂ ಪ್ರಭಾ ಮುಂತಾದ ಉಪಕ್ರಮಗಳ ಮೂಲಕ ಹೊಂದಿಕೊಳ್ಳುವ ಕಲಿಕೆಯ ನಿರ್ವಹಣಾ ವ್ಯವಸ್ಥೆಗಳಿಗೆ ಶಿಕ್ಷಣದ ಬಳಕೆಯ ಉತ್ತೇಜನ.
- ಮೇಲಿನ ಡಿಜಿಟಲ್ ಕಲಿಕಾ ಉಪಕ್ರಮಗಳ ಯಶಸ್ಸಿನ ಮೇಲೆ ನಿರ್ಮಾಣ ಕೌಶಲ್ಯದ ಅವಕಾಶಗಳನ್ನು ಒದಗಿಸಲು **ಉದ್ಯಮ-ಕೇಂದ್ರಿತ ಉಚಿತ ಕೋರ್ಸ್‌ಗಳಿಗಾಗಿ ಡಿಜಿಟಲ್ ವಿಶ್ವವಿದ್ಯಾಲಯ** ಸ್ಥಾಪನೆ.
- ಪ್ರತಿಯೊಬ್ಬ ವಿದ್ಯಾರ್ಥಿಯು ಗುಣಮಟ್ಟದ ಶಾಲಾ ಶಿಕ್ಷಣ ಪಡೆಯುವುದಕ್ಕಾಗಿ **ಪಿಎಂ ಶ್ರೀ ಶಾಲೆಗಳು, ಏಕಲವ್ಯ ಶಾಲೆಗಳು** ಮತ್ತು ಇತರ ಶಾಲೆಗಳ ಜಾಲವನ್ನು ಎನ್‌ಇಪಿ ಪ್ರಕಾರ ಬಲವರ್ಧನೆ.
- ಎನ್‌ಇಪಿ ಆದೇಶದಂತೆ ಶಾಲಾ ಮಟ್ಟದಲ್ಲಿ ಕ್ರಿಯಾತ್ಮಕ ಕಲಿಕಾ ಪಠ್ಯಕ್ರಮವನ್ನು ಅಳವಡಿಕೆ, **ಉನ್ನತ ಶಿಕ್ಷಣದಲ್ಲಿ ನವೀನ ತಂತ್ರಜ್ಞಾನಗಳು, ಉದ್ಯಮ-ಹೊಂದಾಣಿಕೆಯ ಪಠ್ಯಕ್ರಮ** ಮತ್ತು **ಕೌಶಲ್ಯ ಅಭಿವೃದ್ಧಿ**ಯನ್ನು ಸೇರಿಸುವ ಮೂಲಕ ಯುವ ಜನರ ಭವಿಷ್ಯ ನಿರ್ಮಾಣ.
- ಪೂರ್ವ ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅರ್ಹತೆಗಳು, ಪ್ರಮಾಣಪತ್ರಗಳು ಮತ್ತು ಕ್ರೆಡಿಟ್ ಸ್ಕೋರ್ ಸಂಗ್ರಹಿಸಲು ಸ್ವಯಂಚಾಲಿತ ಶಾಶ್ವತ ಶೈಕ್ಷಣಿಕ ಖಾತೆ ನೋಂದಣಿ (ಎಪಿಎಎಆರ್) ಮೂಲಕ **'ಒಂದು ರಾಷ್ಟ್ರ, ಒಂದು ವಿದ್ಯಾರ್ಥಿ ಐಡಿ'** ಅನುಷ್ಠಾನ.
- ಮಹಿಳೆಯರ ಸಬಲೀಕರಣ ಮತ್ತು ಅಂತ್ಯೋದಯದ ಜತೆಗೆ ಯುವಜನರ ಒಳಗೊಳ್ಳುವಿಕೆಯ ಮೂಲಕ ಮುಂದಿನ ಐದು ವರ್ಷಗಳಲ್ಲಿ ಯುವ ಜನರಿಗೆ ಅಗತ್ಯ **ಕೌಶಲ್ಯ ತರಬೇತಿ**. ದೇಶಾದ್ಯಂತ ಶಿಕ್ಷಣ ಸಂಸ್ಥೆಗಳಲ್ಲಿ **ಸ್ಕಿಲ್ ಇಂಡಿಯಾ ಕೇಂದ್ರಗಳ (ಎಸ್‌ಐಸಿ) ಸ್ಥಾಪನೆ.**




# ಕ್ರೀಡಾ ಕ್ಷೇತ್ರದಲ್ಲಿ ಉನ್ನತ ಸಾಧನೆಗೆ ಮೋದಿ ಗ್ಯಾರಂಟಿ

- **2036ರ ಒಲಿಂಪಿಕ್ ಕ್ರೀಡಾಕೂಟದ ಆತಿಥ್ಯ ವಹಿಸಲು ಬಿಡ್** ಸಲ್ಲಿಸಲು ನಾವು **ಐಒಎಗೆ ಅನುಕೂಲ.** ಪ್ರಮುಖ ಅಂತಾರಾಷ್ಟ್ರೀಯ ಕ್ರೀಡಾಕೂಟಗಳನ್ನು ಆಯೋಜಿಸಲು ಕ್ರೀಡಾಂಗಣಗಳು ಮತ್ತು ಅತ್ಯಾಧುನಿಕ ತರಬೇತಿ ಕೇಂದ್ರಗಳಂತಹ ಕ್ರೀಡಾ ಮೂಲಸೌಕರ್ಯಗಳ ಅಭಿವೃದ್ಧಿ. ನಿವೃತ್ತ **ಕ್ರೀಡಾ ಪಟುಗಳ ಕಲ್ಯಾಣಕ್ಕೆ ಸಮಗ್ರ ಯೋಜನೆ,** ಕ್ರೀಡಾಪಟುಗಳಿಗಾಗಿ **ಶೈಕ್ಷಣಿಕ ಅವಕಾಶಗಳು, ಉದ್ಯೋಗಾವಕಾಶಗಳು ಮತ್ತು ಬಡ್ತಿಯಂತಹ ಸೌಲಭ್ಯ.**
- ಕ್ರೀಡೆಗಾಗಿ **ಹೊಸ ಔನ್ನತ್ಯ ಕೇಂದ್ರಗಳ** ಜಾಲ ಅಭಿವೃದ್ಧಿ.
- ಆತ್ಮನಿರ್ಭರ ಭಾರತದ ಗುರಿ ಉದ್ದೇಶಗಳನ್ನು ವಿಸ್ತರಿಸಿ, ಭಾರತದಲ್ಲಿ ಕ್ರೀಡಾ ವ್ಯವಸ್ಥೆಯ ಭಾಗವಾಗಿರುವ **ಕ್ರೀಡಾ ಸರಕುಗಳ ಉತ್ಪಾದನೆ–ಉತ್ಪಾದಕರುಗಳಿಗೆ ಪ್ರೋತ್ಸಾಹ.**
- ಭವಿಷ್ಯದಲ್ಲಿ ನಮ್ಮ ರಾಷ್ಟ್ರವನ್ನು ಹೆಮ್ಮೆಯಿಂದ ಪ್ರತಿನಿಧಿಸಬಲ್ಲ ಕ್ರೀಡಾಪಟುಗಳನ್ನು ಪೋಷಿಸಲು **ಖೇಲೋ ಇಂಡಿಯಾ ಜಾಲವನ್ನು ಮತ್ತು ಇತರ ಉಪಕ್ರಮಗಳ ವಿಸ್ತರಣೆ.**
- ಕ್ರೀಡೆಗಳಿಗೆ ಸಂಬಂಧಿಸಿದ **ಸ್ಟಾರ್ಟ್‌ಪ್‌ಗಳ ಉತ್ತೇಜನ,** ಕ್ರೀಡೆಗಳಲ್ಲಿ **ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು** ರಚಿಸಲು ಸಹಾಯ.



# ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಗೆ ಮೋದಿ ಗ್ಯಾರಂಟಿ

- **ಈಶಾನ್ಯ ಭಾರತದಲ್ಲಿ ಶಾಂತಿ ಸ್ಥಾಪನೆಗೆ** ಕ್ರಮ, ಗಲಭೆಗೊಳಗಾದ ಪ್ರದೇಶಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಮತ್ತು AFSPA ಅನ್ನು ಹಂತ ಹಂತವಾಗಿ ಹಿಂತೆಗೆದುಕೊಳ್ಳಲು ಪ್ರಯತ್ನ. ಈಶಾನ್ಯ ರಾಜ್ಯಗಳ ನಡುವಿನ ಅಂತರರಾಜ್ಯ ಗಡಿ ವಿವಾದ ಪರಿಹರಿಸಲು ಮತ್ತಷ್ಟು ಪರಿಣಾಮಕಾರಿ ಕಾರ್ಯ.
- ಪೂರ್ವ ದೇಶಗಳೊಂದಿಗೆ **ಶಿಕ್ಷಣ, ಆರೋಗ್ಯ, ಆರ್ಥಿಕ ಅಭಿವೃದ್ಧಿ** ಮತ್ತು ಭದ್ರತೆಯನ್ನು ಖಾತ್ರಿಪಡಿಸುವ ಕಾರ್ಯತಂತ್ರದ ಹೆಬ್ಬಾಗಿಲಾಗಿ **ಈಶಾನ್ಯ ಭಾರತವನ್ನು ಮುಂಚೂಣಿಗೆ ತರಲು ಕಾರ್ಯ** ಯೋಜನೆ.
- ಭೌಗೋಳಿಕವಾಗಿ ಹೆಚ್ಚುವರಿ ನೀರನ್ನು ಸಂಗ್ರಹಿಸಲು **ದೊಡ್ಡ ಜಲಾಶಯಗಳನ್ನು ನಿರ್ಮಿಸಬಹುದಾದ ಸ್ಥಳಗಳನ್ನು ಗುರುತಿಸಲು ಸುಧಾರಿತ ಉಪಗ್ರಹಗಳ ನೆರವು**. ಈ ಮೂಲಕ ಈಶಾನ್ಯ ಭಾಗದಲ್ಲಿ ಪ್ರವಾಹ ನಿರ್ವಹಣೆ ಹತೋಟಿಗೆ ಕಾರ್ಯಯೋಜನೆ.
- ಪೂರ್ವ ಭಾರತದ ಉದ್ದೇಶಿತ ಮತ್ತು ಸಮಗ್ರ ಮೂಲಸೌಕರ್ಯ ಅಭಿವೃದ್ಧಿಗಾಗಿ ಮೀಸಲಾದ **ಪೂರ್ವೋದಯ ಮಾಸ್ಟರ್ ಪ್ಲಾನ್**.
- ವಿಶ್ವ ದರ್ಜೆಯ ಬೀಚ್ ರೆಸಾರ್ಟ್‌ಗಳು, ಸಾಗರ ಸಾಹಸ ಚಟುವಟಿಕೆಗಳು ಮತ್ತು ದೃಢವಾದ ಕರಾವಳಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ **ದ್ವೀಪಗಳನ್ನು ಪ್ರಮುಖ ಜಾಗತಿಕ ಪ್ರವಾಸೋದ್ಯಮ ತಾಣಗಳಾಗಿ ಪರಿವರ್ತನೆ**.
- ಸುಸ್ಥಿರ ಅಭಿವೃದ್ಧಿ ಉಪಕ್ರಮಗಳ ಮೂಲಕ **ಭಾರತದ ಗುಡ್ಡಗಾಡು ರಾಜ್ಯಗಳ ಅನನ್ಯ ಪರಿಸರ ಸಮತೋಲನದ ರಕ್ಷಣೆ** ಮತ್ತು ಸಂರಕ್ಷಣೆ. ಹಿಮಾಲಯ ನದಿಗಳ ಪ್ರವಾಹವನ್ನು ಎದುರಿಸಲು ನೆರೆಯ ದೇಶಗಳೊಂದಿಗೆ ಕೈ ಜೋಡಿಸುವಿಕೆ.




# ತಂತ್ರಜ್ಞಾನ ಮತ್ತು ಆವಿಷ್ಕಾರಕ್ಕಾಗಿ ಮೋದಿ ಗ್ಯಾರಂಟಿ

**ಅಂತರಿಕ್ಷ ಸಾಧನೆ**

- ಗಗನ್ ಯಾನ ಯೋಜನೆ ಮೂಲಕ ಮೊದಲ ಮಾನವಸಹಿತ ಬಾಹ್ಯಾಕಾಶ ಯಾನ ಕೈಗೊಂಡು ಚಂದ್ರನ ಮೇಲೆ ಗಗನಯಾತ್ರಿಯನ್ನು ಇಳಿಸಲು ಕಾರ್ಯಯೋಜನೆ.ಇದು ಅಮೃತ್ ಕಾಲದ ಈ ಸಮಯದಲ್ಲಿ ಭಾರತದ ಪ್ರಗತಿ ಮತ್ತು ಸಮೃದ್ಧಿಯ ಸಂಕೇತವಾಗಿದೆ.
- ದೇಶದ ದ್ವಿತೀಯ ಬಾಹ್ಯಾಕಾಶ ಉಡಾವಣಾ ಕೇಂದ್ರ ಸ್ಥಾಪನೆಯ ಜೊತೆಗೆ ಭಾರತೀಯ ಅಂತರಿಕ್ಷ ಕೇಂದ್ರದ ಅಭಿವೃದ್ಧಿ.
- ಅಂತರಿಕ್ಷ ಕ್ಷೇತ್ರದಲ್ಲಿ ಭಾರತವನ್ನು ಪ್ರಮುಖ ಶಕ್ತಿಯನ್ನಾಗಿಸುವ ಮೂಲಕ ಭಾರತೀಯ ತಂತ್ರಜ್ಞಾನ ಮತ್ತು ಸೇವೆಗಳನ್ನು ಇತರೆ ದೇಶಗಳ ಸದ್ಬಳಕೆಗೆ ಅವಕಾಶ ನೀಡಿ, ಬೆಳವಣಿಗೆಗೆ, ಅಭಿವೃದ್ಧಿ ದಾರಿ ಮಾಡಿಕೊಡಲು ಕ್ರಮ.
- ಸ್ಪೇಸ್ ತಂತ್ರಜ್ಞಾನದಲ್ಲಿ ಹಿಂದುಳಿದ ದೇಶಗಳಿಗೆ ಸಂಶೋಧನೆಗಳನ್ನು ಕೈಗೊಳ್ಳಲು ಇಸ್ರೋ ಮತ್ತು ಐಐಎಸ್‌ಟಿ ಜತೆಗೂಡಿ ಜಾಗತಿಕ ಸ್ಪೇಸ್ ಅಕಾಡೆಮಿ ಅಭಿವೃದ್ಧಿ. ಈ ಮೂಲಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಗುಂಪಿನಲ್ಲಿ ಭಾರತಕ್ಕೆ ಹೆಚ್ಚಿನ ಮಾನ್ಯತೆ ಸಿಗಲಿದೆ.

**ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಕೇಂದ್ರಕ್ಕೆ ಚಾಲನೆ**

- ದೇಶಾದ್ಯಂತ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಮೂಲಸೌಕರ್ಯ ಒದಗಿಸಲು ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಕೇಂದ್ರಕ್ಕೆ ಚಾಲನೆ.

**ವೈಜ್ಞಾನಿಕ ಸಂಶೋಧನಾ ನಿಧಿ ಸ್ಥಾಪನೆ**

- ವೈಜ್ಞಾನಿಕ ಸಂಶೋಧನೆಗೆ ಉತ್ತೇಜನ ನೀಡುವ ಸಲುವಾಗಿ ಬಡ್ಡಿ ರಹಿತ ಸಾಲ ನೀಡಲು 1 ಲಕ್ಷ ಕೋಟಿ ಹೂಡಿಕೆಯಲ್ಲಿ ಅನುಸಂಧಾನ ನಿಧಿಯ ಸ್ಥಾಪನೆಗೆ ಕ್ರಮ

### ಎಐ–ಕೃತಕ ಬುದ್ಧಿಮತ್ತೆ ಕ್ಷೇತ್ರದ ವೇಗವರ್ಧನೆ

- ಹೊಸ ಆವಿಷ್ಕಾರಗಳಿಗೆ ದಾರಿ ಮಾಡಿಕೊಡಲು, ಕೃತಕ ಬುದ್ಧಿಮತ್ತೆಯಲ್ಲಿ ಜಾಗತಿಕ ಸ್ಥಾನಕ್ಕಾಗಿ ಇಂಡಿಯಾ ಎಐ ಮಿಷನ್ ಅಡಿಯಲ್ಲಿ ಸಮಗ್ರ ಮೂಲಸೌಕರ್ಯಗಳ ವ್ಯವಸ್ಥೆಯ ಅಭಿವೃದ್ಧಿ.
- ಪಾಲುದಾರಿಕೆಗಳ ಮೂಲಕ AI ಆವಿಷ್ಕಾರಗಳನ್ನು ಸದ್ಬಳಕೆ ಮಾಡಿಕೊಂಡು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಸಾರ್ವಭೌಮತ್ವ ಹೊಂದಲು ಕಾರ್ಯಯೋಜನೆ.

### ಗ್ರಾಫಿನ್ ಮಿಷನ್

- ಗ್ರಾಫಿನ್ ಆಧಾರಿತ ತಂತ್ರಜ್ಞಾನ ವಿಸ್ತಾರಕ್ಕೆ ಕಾರ್ಯಯೋಜನೆ

### ಕ್ವಾಂಟಂ ತಂತ್ರಜ್ಞಾನ ಕೇಂದ್ರ

- ಕ್ವಾಂಟಮ್ ತಂತ್ರಜ್ಞಾನದಲ್ಲಿ ಭಾರತವನ್ನು ಜಾಗತಿಕವಾಗಿ ಪ್ರಮುಖ ರಾಷ್ಟ್ರವನ್ನಾಗಿ ರೂಪಿಸಲು ರಾಷ್ಟ್ರೀಯ ಕ್ವಾಂಟಮ್ ಮಿಷನ್ ಕಾರ್ಯಗತ.
- ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿಯನ್ನುಂಟು ಮಾಡುವ ಸಾಮರ್ಥ್ಯವನ್ನು ಬಳಸಿ ತಾಂತ್ರಿಕ ಆವಿಷ್ಕಾರವನ್ನು ಮುನ್ನಡೆಸಲು ಇದು ಸಹಕಾರಿ.

### ಜಿಯೋಸ್ಪೇಷಿಯಲ್ ಡೇಟಾ ಉತ್ಕೃಷ್ಟತೆಯ ಗುರಿ

- ರಾಷ್ಟ್ರೀಯ ಜಿಯೋಸ್ಪೇಷಿಯಲ್ ಡೇಟಾ ರಿಜಿಸ್ಟ್ರಿ ಮತ್ತು ಜಿಯೋಸ್ಪೇಷಿಯಲ್ ಡೇಟಾ ವಿನಿಮಯದ ಮೂಲಕ ಹೊಸ ಉತ್ಪನ್ನಗಳ ತಯಾರಿಕೆ ಮತ್ತು ಸೇವೆಗಳಿಗಾಗಿ ಕೈಗಾರಿಕೆಗಳು ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಅನುಕೂಲಕರ ವ್ಯವಸ್ಥೆ.

### ವಿಜ್ಞಾನ ಪಾರ್ಕ್‌ಗಳ ಸ್ಥಾಪನೆ

- ವಿವಿಧ ನಗರಗಳಲ್ಲಿ ವಿಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸುವ ಮೂಲಕ ಭಾರತೀಯ ಯುವ ಜನಾಂಗದಲ್ಲಿ ವೈಜ್ಞಾನಿಕ ಮನಸ್ಥಿತಿ ಮತ್ತು ಆವಿಷ್ಕಾರಗಳಿಗೆ ಹೆಚ್ಚಿನ ಅವಕಾಶ.

### ಹವಮಾನ ರಕ್ಷಣೆಗಾಗಿ ರಾಷ್ಟ್ರೀಯ ಮಿಷನ್ ಸ್ಥಾಪನೆ:

- ಭಾರತದಲ್ಲಿನ ಪ್ರಾಕೃತಿಕ ವಿಕೋಪಗಳು ಮತ್ತು ಹವಾಮಾನ ವೈಪರೀತ್ಯಗಳನ್ನು ಎದುರಿಸಲು ಸದಾ ಸನ್ನದ್ಧವಾಗಿರಲು ರಾಷ್ಟ್ರೀಯ ಹವಾಮಾನ ಮಿಷನ್ ಅನುಷ್ಠಾನಗೊಳಿಸಲು ಕ್ರಮ.





# ಸುಸ್ಥಿರ ಭಾರತಕ್ಕೆ ಮೋದಿ ಗ್ಯಾರಂಟಿ

**ಪಳಯುಳಿಕೆಯಲ್ಲದ ಇಂಧನ ಸಾಮರ್ಥ್ಯದಲ್ಲಿ ಹೆಚ್ಚಳ**

- ಪರಿಸರದ ಮೇಲಿನ ಕಾಳಜಿಯ ಪರಿಣಾಮ ವಿದ್ಯುತ್ ಉತ್ಪಾದನೆಯಲ್ಲಿ ಪಳಯುಳಿಕೆಯಲ್ಲದ ಇಂಧನದ ಪಾಲಿನಲ್ಲಿ ಶೇ. 44 ರಷ್ಟು ಹೆಚ್ಚಳ.
- ಪಂಚಾಮೃತ್ ಯೋಜನೆಯ ಗುರಿಯಂತೆ 2070ರ ವೇಳೆಗೆ ಮಾಲಿನ್ಯ ರಹಿತ ಪ್ರಮಾಣದ ಗುರಿಯನ್ನು ಸಾಧನೆ.

**ನದಿಗಳ ಪುನರುಜ್ಜೀವನ**

- ನಮಾಮಿ ಗಂಗೆ ಶುದ್ಧೀಕರಣಕ್ಕೆ ಬಳಕೆ ಮಾಡಿದ ಗುಣಮಟ್ಟದ ತಂತ್ರಜ್ಞಾನವನ್ನು ಇನ್ನಿತರ ನದಿಗಳ ಶುದ್ಧೀಕರಣಕ್ಕೆ ಬಳಕೆ.
- ನಮಾಮಿ ಗಂಗೆ ಮಾದರಿಯಲ್ಲಿ ಮಹಾನದಿ, ನರ್ಮದಾ, ಕಾವೇರಿ, ಕೃಷ್ಣಾ ನದಿಗಳನ್ನು ಮೊದಲ ಹಂತದಲ್ಲಿ ಶುದ್ಧೀಕರಿಸುವ ಮೂಲಕ ಶುದ್ಧತೆ ಮತ್ತು ನೈರ್ಮಲ್ಯಕ್ಕೆ ಒತ್ತು.
- ಆಧುನಿಕ ತಂತ್ರಜ್ಞಾನಗಳ ಜೊತೆಗೆ ಸಾಂಪ್ರದಾಯಿಕ ಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಚೆಕ್ ಡ್ಯಾಂ ನಿರ್ಮಾಣ, ಅಮೃತ್ ಸರೋವರ ನಿರ್ಮಾಣ ಮತ್ತು ಜಲಾನಯನ ನಿರ್ವಹಣೆಯನ್ನು ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಗೆ ಜೋಡಣೆ.
- ಆ ಮೂಲಕ ಪ್ರಮುಖ ನದಿಗಳ ಜಲಾನಯನ ಪ್ರದೇಶಗಳ ಸಂರಕ್ಷಣೆ ಮತ್ತು ಪುನರುತ್ಥಾನಕ್ಕೆ ವೇಗ
- ಕೈಗಾರಿಕಾ ಮಾಲಿನ್ಯ ಮತ್ತು ನೈಸರ್ಗಿಕ ಮಾಲಿನ್ಯಗಳಿಂದ ಕಲುಷಿತಗೊಂಡ ನೀರನ್ನು ಸಂಸ್ಕರಿಸಲು ಸೂಕ್ತ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರಗಳಿಗೆ ಸಹಾಯ.

### ವಾಯು ಮಾಲಿನ್ಯ ನಿಯಂತ್ರಣ

- ದೇಶದ 131 ನಗರಗಳಲ್ಲಿ ವಾಯುಮಾಲಿನ್ಯ ನಿಯಂತ್ರಣಕ್ಕೆ ರಾಷ್ಟ್ರೀಯ ವಾಯು ಶುದ್ಧೀಕರಣ ಯೋಜನೆ ಜಾರಿ.
- 2029 ರ ಹೊತ್ತಿಗೆ ಪ್ರಮುಖ 60 ನಗರಗಳಲ್ಲಿ ವಾಯುಮಾಲಿನ್ಯ ನಿಯಂತ್ರಣಕ್ಕೆ ಕ್ರಮ
- ಕಾಡು ಹೆಚ್ಚಳಕ್ಕೆ ಮತ್ತು ಅರಣ್ಯ ಕೃಷಿಗೆ ಪ್ರೋತ್ಸಾಹ
- ನಮ್ಮಲ್ಲಿರುವ ಕಾಡಿನ ಪ್ರಮಾಣವನ್ನು ಹೆಚ್ಚಿಸುವ ಮೂಲಕ ದೇಶದಲ್ಲಿ ಕಾಡುಪ್ರದೇಶಗಳ ವಿಸ್ತರಣೆ.
- ಅರಾವಳಿ ಪ್ರದೇಶದಲ್ಲಿನ ಜೀವವೈವಿಧ್ಯತೆಯನ್ನು ರಕ್ಷಿಸಲು ಮತ್ತು ಮರುಭೂಮಿಯ ಪ್ರಮಾಣವನ್ನು ತಗ್ಗಿಸಲು ಅವಶ್ಯವಿರುವ ಹಸಿರು ಕಾರಿಡಾರ್ ನಿರ್ಮಿಸಲು ಹಸಿರು ಅರಾವಳಿ ಯೋಜನೆಗೆ ಚಾಲನೆ.

### ಹಿಮಾಲಯದ ನದಿಗಳ ರಕ್ಷಣೆ

- ಪ್ರವಾಹದ ಪರಿಣಾಮಗಳನ್ನು ತಗ್ಗಿಸಿ,ಪರಿಸ್ಥಿತಿ ನಿರ್ವಹಿಸಲು ಮತ್ತು ಜಲವಿದ್ಯುತ್ ಶಕ್ತಿಯನ್ನು ಬಳಸಿಕೊಳ್ಳುವ ಸಮಗ್ರ ಅನುಷ್ಠಾನಕ್ಕೆ ನೆರೆಯ ರಾಷ್ಟ್ರಗಳ ಜೊತೆಗೆ ಸಹಕಾರ.

### ಕರಾವಳಿ ಪ್ರದೇಶಗಳ ರಕ್ಷಣೆ

- ಹವಾಮಾನ ಬದಲಾವಣೆ ಮತ್ತು ಪ್ರಾಕೃತಿಕ ವಿಕೋಪ ಎದುರಿಸಲು ಕರಾವಳಿ ಪ್ರದೇಶಗಳ ರಕ್ಷಣಾ ಕ್ರಮಗಳ ಜಾರಿ.
- ಗ್ರೀನ್ ಕ್ರೆಡಿಟ್ ಯೋಜನೆ ವಿಸ್ತರಣೆ
- ಇಂಗಾಲದ ಪ್ರಮಾಣ ಕಡಿಮೆ ಮಾಡುವ ಯೋಜನೆಯನ್ನು ವಿಸ್ತರಿಸುವ ಮೂಲಕ ಗ್ರೀನ್ ಕ್ರೆಡಿಟ್ ಯೋಜನೆಯಲ್ಲಿ ಭಾರತದ ಸಾಧನೆಯನ್ನು ಗಟ್ಟಿಗೊಳಿಸಲು ಕ್ರಮ.

### ವಿಪತ್ತು ನಿರ್ವಹಣೆಗೆ ಕ್ರಮ

- ತಾಂತ್ರಿಕತೆಯನ್ನು ಅಭಿವೃದ್ಧಿಪಡಿಸುವ ಮೂಲಕ ನೈಸರ್ಗಿಕ ವಿಕೋಪಗಳಿಂದ ಉಂಟಾಗುವ ಸಾವು–ನೋವುಗಳು ಮತ್ತು ನಷ್ಟಗಳನ್ನು ತಡೆಯಲು ಕ್ರಮ.
- ಮಾನವ ಮತ್ತು ವನ್ಯ ಜೀವಿಗಳ ಸಂಘರ್ಷ ನಿರ್ವಹಣೆ
- ಅರಣ್ಯಗಳಿಗೆ ಸಮೀಪವಿರುವ ಪ್ರದೇಶಗಳಲ್ಲಿ ಮಾನವ ಮತ್ತು ವನ್ಯ ಜೀವಿಗಳ ಸಂಘರ್ಷವನ್ನು ಸೂಕ್ಷ್ಮವಾಗಿ ನಿರ್ವಹಿಸಲು ರಾಜ್ಯ ಸರ್ಕಾರಗಳು ಮತ್ತು ಸಂಬಂಧಪಟ್ಟ ವ್ಯವಸ್ಥೆಗೆ ಸಹಕಾರ.



- ಇ –ತ್ಯಾಜ್ಯ ನಿರ್ವಹಣೆಗೆ ರಾಷ್ಟ್ರೀಯ ಯೋಜನೆ
- ಇ–ತ್ಯಾಜ್ಯದ ಸುರಕ್ಷಿತ ವಿಲೇವಾರಿಗಾಗಿ ರಾಷ್ಟ್ರೀಯ ಯೋಜನೆ ಪ್ರಾರಂಭ.
- ಆರೋಗ್ಯಕರ ಜೀವನ ಪದ್ಧತಿಗೆ ಪ್ರೋತ್ಸಾಹ
- ಪರಿಸರ ನಿರ್ವಹಣೆಯೊಂದಿಗೆ ನಮ್ಮ ಆರೋಗ್ಯಕರ ಜೀವನಕ್ಕೆ ಪಾರಂಪರಿಕ ಮತ್ತು ಆಧುನಿಕವಾದ ಅತ್ಯುತ್ತಮವಾದ ಪರಿಸರ ಸ್ನೇಹಿ ಜೀವನ ಪದ್ಧತಿಗೆ ಪ್ರೋತ್ಸಾಹ.
- ಆ ಮೂಲಕ ಭಾರತೀಯ ಆರೋಗ್ಯಕರ ಜೀವನ ಪದ್ಧತಿಯನ್ನು ಜಾಗತಿಕ ಮಟ್ಟದಲ್ಲಿ ಅಳವಡಿಕೊಳ್ಳಲು ಉತ್ತೇಜನ, ಮರುಬಳಕೆಗೆ ಪ್ರೋತ್ಸಾಹ
- ಬಳಸಿದ ಉತ್ಪನ್ನಗಳಿಂದ ಖನಿಜ ಸಂಗ್ರಹಕ್ಕಾಗಿ ವ್ಯವಸ್ಥಿತ ಪದ್ಧತಿ ಜಾರಿ.
- ಮರುಬಳಕೆ ಕ್ರಮಗಳನ್ನು ಉತ್ತೇಜಿಸುವ ಮೂಲಕ ಎಲ್ಲಾ ಕ್ಷೇತ್ರಗಳಲ್ಲೂ ಮರುಬಳಕೆ ಉತ್ಪನ್ನಗಳ ಸದ್ಬಳಕೆ ಕ್ರಮ
- ಪರಿಸರ ಸಂರಕ್ಷಣೆಗೆ ವಿವಿಧ ಯೋಜನೆಗಳ ಅನುಷ್ಠಾನ
- ಪರಿಸರವನ್ನು ರಕ್ಷಿಸಲು ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ, ರೈಲ್ವೆ ವಿದ್ಯುದ್ದೀಕರಣ, ಪಿಎಂ ಇ–ಬಸ್, ಎಥೆನಾಲ್ ಮತ್ತು ಜೈವಿಕ ಇಂಧನ ಬಳಕೆಗೆ ಪ್ರಚಾರದಂತಹ ಅನೇಕ ಕಾರ್ಯಕ್ರಮಗಳ ಆರಂಭ.
- ಈ ಎಲ್ಲಾ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದಿಂದ ನಾಗರೀಕರಿಗೆ ಸ್ವಚ್ಛ ಪರಿಸರದಲ್ಲಿ ವಾಸಿಸುವ ಅವಕಾಶ



  

# ಮೋದಿ ಗ್ಯಾರಂಟಿ

2047ರ ವೇಳೆಗೆ ವಿಕಸಿತ ಭಾರತ ನಿರ್ಮಿಸುವ ಸಂಕಲ್ಪ

**ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ**